# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಜೂನ್ 1, 2021

ಸಂಪುಟ : 48 ಸಂಚಿಕೆ : 18 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ಆರ್ಥಿಕತೆ ಶೇ.7.3ರ ಕುಸಿತ

**ನಾಲ್ಕು ದಶಕಗಳ ನಂತರ ಮೊದಲ ಬಾರಿಗೆ ವರ್ಷದ ಆರ್ಥಿಕತೆಗೆ ಋಣಾತ್ಮಕ**

ನವದೆಹಲಿ, ಮೇ 31 – ಭಾರತದ ಆರ್ಥಿಕತೆ 2021ರ ಮಾರ್ಚ್‌ಗೆ ಅಂತ್ಯಗೊಂಡ ಹಣಕಾಸು ವರ್ಷದಲ್ಲಿ ಶೇ.7.3ರಷ್ಟು ಕುಸಿದಿದೆ. ಕೊರೊನಾ ವೈರಸ್ ಕಾರಣದಿಂದಾಗಿ ಆರ್ಥಿಕತೆಗೆ ಹಿಂದೆಂದೂ ಕಾಣದಷ್ಟು ಹೊಡೆತ ಬಿದ್ದಿದೆ.

ದೇಶದ ಜಿ.ಡಿ.ಪಿ. ಕೊನೆಯ ಜನವರಿ - ಮಾರ್ಚ್ ಚತುರ್ಥದಲ್ಲಿ ಶೇ. 1.6ರ ಬೆಳವಣಿಗೆ ಕಂಡಿದೆ. ಹಿಂದಿನ ಚತುರ್ಥದಲ್ಲಿ ಶೇ.0.5ರ ಬೆಳವಣಿಗೆಯಾಗಿತ್ತು. 2020ರ ಜನವರಿ - ಮಾರ್ಚ್ ಚತುರ್ಥದಲ್ಲಿ ದೇಶದ ಜಿ.ಡಿ.ಪಿ. ಬೆಳವಣಿಗೆ ಶೇ.3ರಷ್ಟಿತ್ತು.

ಕೊರೊನಾ ಬರುವುದಕ್ಕೆ ಮೊದಲೇ ದೇಶದ ಆರ್ಥಿಕತೆ ಮಂದವಾಗಿತ್ತು. ಕೊರೊನಾ ಹಿನ್ನೆಲೆಯಲ್ಲಿ 2020ರ ಏಪ್ರಿಲ್‌ನಿಂದ ಮಾರ್ಚ್ 2021ರ ನಡುವೆ ಆರ್ಥಿಕ ಕುಸಿತ ಶೇ.7.3ರಷ್ಟಾಗಿದೆ. ಲಾಕ್‌ಡೌನ್ ಕಾರಣದಿಂದಾಗಿ ಖರೀದಿ ಹಾಗೂ ಆರ್ಥಿಕ ಚಟುವಟಿಕೆಗಳು ಬಹುತೇಕ ನಿಂತಿದ್ದವು.

ಕಳೆದ ನಾಲ್ಕು ದಶಕಗಳಲ್ಲಿ ಮೊದಲ ಬಾರಿಗೆ ಇಡೀ ವರ್ಷದಲ್ಲಿ ಆರ್ಥಿಕ ಕುಸಿತವಾಗಿದೆ. ಈ ಹಿಂದೆ 1979-80ರಲ್ಲಿ ಆರ್ಥಿಕತೆ ಶೇ.5.2ರಷ್ಟು ಕುಸಿದಿತ್ತು. 2019-20ರಲ್ಲಿ ಆರ್ಥಿಕತೆ ಶೇ.4ರ ಬೆಳವಣಿಗೆ ಕಂಡಿತ್ತು. ಅದಕ್ಕೂ ಹಿಂದಿನ 2017ರಲ್ಲಿ ಆರ್ಥಿಕತೆಯಲ್ಲಿ ಶೇ.8.3ರ ಬೆಳವಣಿಗೆಯಾಗಿತ್ತು.

ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿಯ ಪ್ರಕಟಣೆಯ ಪ್ರಕಾರ, 2020-21ರಲ್ಲಿ ಆರ್ಥಿಕತೆ 135 ಲಕ್ಷ ಕೋಟಿ ರೂ.ಗಳಿಗೆ ಕುಸಿದಿದೆ. ಅದಕ್ಕೂ ಹಿಂದಿನ ವರ್ಷ ಜಿ.ಡಿ.ಪಿ. ಪ್ರಮಾಣ 145 ಲಕ್ಷ ಕೋಟಿ ರೂ. ಆಗಿತ್ತು.

ಮತ್ತೆ ಹಳೆಯ ಸ್ಥಿತಿಗೆ ಬರಲು 2021-22ರಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ.10-11ರಷ್ಟಿರಬೇಕಿದೆ. ಆದರೆ, ಎರಡನೇ ಅಲೆಯ ಕಾರಣದಿಂದಾಗಿ (4ನೇ ಪುಟಕ್ಕೆ)

## ಕೊರೊನಾ ಖರೀದಿ..?
## ಮಾರುಕಟ್ಟೆಯಲ್ಲಿ ಜನಜಾತ್ರೆ

**ಅಡುಗೆ ಎಣ್ಣೆ ಖರೀದಿಗೆ ಸರದಿ ಸಾಲು**

**ಸಾಮಾಜಿಕ ಅಂತರ ಮರೆತ ಜನತೆ**

**ತೆರವಾಗದ ಬ್ಯಾರಿಕೇಡ್: ಜನ ಹೈರಾಣ**



ದಾವಣಗೆರೆ, ಮೇ 31- ಅಗತ್ಯ ವಸ್ತುಗಳ ಖರೀದಿಗೆ ಮಾರುಕಟ್ಟೆಗೆ ನುಗ್ಗಿದ ಜನತೆ, ಸಿಕ್ಕೀತೋ ಇಲ್ಲವೋ ಎಂಬಂತೆ ಖರೀದಿ, ಏಕ ಕಾಲದಲ್ಲಿಯೇ ಲೋಡಿಂಗ್, ಅನ್ ಲೋಡಿಂಗ್, ಟ್ರಾಫಿಕ್ ಜಾಮ್, ಹೈರಾಣಾದ ಜನತೆ...

ಸೋಮವಾರ ಮುಂಜಾನೆ ದಾವಣಗೆರೆ ಮಾರುಕಟ್ಟೆಯಲ್ಲಿ ಕಂಡು ಬಂದ ಪ್ರಮುಖ ದೃಶ್ಯಗಳಿವು. ಮಾರುಕಟ್ಟೆಯನ್ನೊಮ್ಮೆ ನೋಡಿದರೆ ಜನರು ವಸ್ತುಗಳನ್ನು ಖರೀದಿಸುತ್ತಿದ್ದಾರೋ ಅಥವಾ ಕೊರೊನಾ ಸೋಂಕು ಖರೀದಿಸುತ್ತಿದ್ದಾರೋ ಎಂದನಿಸಿದ್ದು ನಿಜ.

ಕಳೆದ ಒಂದು ವಾರದ ನಂತರ ಅಗತ್ಯ ವಸ್ತುಗಳ ಖರೀದಿಗೆ ಮುಂಜಾನೆ 6 ರಿಂದ ಮಧ್ಯಾಹ್ನ 12ರವರೆಗೆ ಅನುಮತಿ ನೀಡಿದ್ದರಿಂದ ಜನ ಮಾರುಕಟ್ಟೆಗೆ ದಾಂಗುಡಿ ಇಟ್ಟಿದ್ದರು. ಪರಿಣಾಮ ಮಾರ್ಕೆಟ್‌ನಲ್ಲಿ ಜನಜಾತ್ರೆಯೇ ನೆರೆದಿತ್ತು. ಸಮಾಜಿಕ ಅಂತರ ಮರೆಯಾಗಿತ್ತು.

ಕೊರೊನಾ ಇದೆ ಎಂಬುದನ್ನೇ ಮರೆತಂತೆ ಜನರು ವಸ್ತುಗಳ ಖರೀದಿಗೆ ಮುಗಿ ಬಿದ್ದಿದ್ದರು. ಒಂದು ಕಡೆ ಕಿರಾಣಿ ಅಂಗಡಿಗಳ ಮಾಲೀಕರು ಹೋಲ್ ಸೇಲ್ ಅಂಗಡಿಗಳಿಗೆ ಮುಗಿ ಬಿದ್ದಿದ್ದರೆ, ರಿಟೇಲ್ ಖರೀದಿ ದಾರರೂ ಸಹ ಅಗತ್ಯಕ್ಕಿಂತ ಹೆಚ್ಚು ವಸ್ತುಗಳನ್ನು ಖರೀದಿಸಲು ಮುಂದಾಗಿದ್ದರಿಂದ ಅವರೂ ಸಹ ಹೋಲ್ ಸೇಲ್ ಖರೀದಿದಾರರೇ ಆಗಿದ್ದರು.

**ಏಕಕಾಲದಲ್ಲಿಯೇ ಲೋಡಿಂಗ್-ಅನ್‌ಲೋಡಿಂಗ್ :** ಇತ್ತ ಹೋಲ್ ಸೇಲ್ ವ್ಯಾಪಾರಿಗಳು ವಸ್ತುಗಳನ್ನು ಅನ್‌ಲೋಡಿಂಗ್ ಮಾಡಿಕೊಳ್ಳುತ್ತಿದ್ದರು. ಮತ್ತೊಂಡೆಗೆ ಖರೀದಿಸಿದವರು ದ್ವಿಚಕ್ರ, ತ್ರಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನಗಳಿಗೆ ವಸ್ತುಗಳನ್ನು ಲೋಡ್ ಮಾಡುತ್ತಿದ್ದರು. ಈ ಎರಡೂ ಕಾರ್ಯಗಳು ಏಕಕಾಲದಲ್ಲಿಯೇ (2ನೇ ಪುಟಕ್ಕೆ)

## ಎಲ್ಲಾ ತಾಲ್ಲೂಕಿಗೂ ಸಮಾನ ಸೌಲಭ್ಯ

### ಜಿಲ್ಲಾಧಿಕಾರಿ ವಿರುದ್ಧ ಶಾಸಕರ ಆರೋಪ ಸರಿಯಲ್ಲ: ಸಚಿವ ಭೈರತಿ

ಹರಿಹರ, ಮೇ 31- ಕೊರೊನಾ ರೋಗದ ಸಮಸ್ಯೆ ಹೆಚ್ಚಾಗುತ್ತಿದ್ದಂತೆ ನಾನು ಮೂರು ಬಾರಿ ಭೇಟಿ ನೀಡಿ ಜಿಲ್ಲೆಯ ಎಲ್ಲಾ ತಾಲ್ಲೂಕಿಗೆ ಸರಿ ಸಮಾನವಾದ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದ್ದು, ಯಾವುದೇ ತಾಲ್ಲೂಕಿಗೆ ತಾರತಮ್ಯ ಮಾಡಿರುವುದಿಲ್ಲ. ಸ್ಥಳೀಯ ಶಾಸಕರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ ಮತ್ತು ಅಧಿಕಾರಿಗಳಿಂದ ಯಾವ ರೀತಿ ಕೆಲಸವನ್ನು ತೆಗೆದುಕೊಳ್ಳುತ್ತಾರೆ ಎಂಬುದು ಮುಖ್ಯವಾಗಿರುತ್ತದೆ. ಅದನ್ನು ಬಿಟ್ಟು ಜಿಲ್ಲಾಧಿಕಾರಿಗಳ ಮೇಲೆ ಸ್ಥಳೀಯ ಶಾಸಕರು ಆರೋಪಗಳನ್ನು ಮಾಡುವುದು ಉತ್ತಮ ಬೆಳವಣಿಗೆಯಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.



ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸುಮಾರು 70 ಲಕ್ಷ ರೂಪಾಯಿ ವೆಚ್ಚದ ಆಕ್ಸಿಜನ್ ಪ್ಲಾಂಟ್ ನಿರ್ಮಾಣದ ಸ್ಥಳ ಪರಿಶೀಲಿಸಿ ಅವರು ಮಾತನಾಡಿದರು.

ನಾನು ಜಿಲ್ಲೆಯ ಜಗಳೂರು, ಮಾಯಕೊಂಡ, ಹೊನ್ನಾಳಿ, ದಾವಣಗೆರೆ, ಚನ್ನಗಿರಿ ಸೇರಿದಂತೆ ಎಲ್ಲಾ ತಾಲ್ಲೂಕಿಗೆ ಏನೇನು ಸಹಕಾರ ಬೇಕೋ ಅದನ್ನು ಒದಗಿಸಲು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರವನ್ನು (2ನೇ ಪುಟಕ್ಕೆ)

## ರೈತರಿಗೆ 20 ಸಾವಿರ ಕೋಟಿ ರೂ. ಬೆಳೆ ಸಾಲ

ಬೆಂಗಳೂರು, ಮೇ 31 - ಪ್ರಸಕ್ತ ಹಂಗಾಮಿನಲ್ಲಿ ರೈತರಿಗೆ 20,810 ಕೋಟಿ ರೂ. ಬೆಳೆ ಸಾಲ ವಿತರಿಸುವುದಾಗಿ ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲ ಸಹಕಾರಿ ಪತ್ತಿನ ಬ್ಯಾಂಕುಗಳು ಈ ಬಾರಿ 30 ಲಕ್ಷ ರೈತರಿಗೆ ಸಾಲ ನೀಡಬೇಕೆಂದು ಡಿಸಿಸಿ ಬ್ಯಾಂಕ್‌ಗಳಿಗೆ ಆದೇಶ ಮಾಡಿರುವುದಾಗಿ ಹೇಳಿದರು. (5ನೇ ಪುಟಕ್ಕೆ)

## ಕೃಷ್ಣಪಟ್ನಂನ ಆಯು ಔಷಧಿಗೆ ಆಂಧ್ರದ ಒಪ್ಪಿಗೆ

ಅಮರಾವತಿ, ಮೇ 31 – ಕೊರೊನಾ ರೋಗಿಗಳಿಗೆ ರಾಮಬಾಣ ಎಂದು ಜನರು ಪರಿಗಣಿಸುತ್ತಿರುವ ಆಯುರ್ವೇದ ಔಷಧಿಗೆ ಆಂಧ್ರ ಪ್ರದೇಶ ಸರ್ಕಾರ ಹಸಿರು ನಿಶಾನೆ ತೋರಿಸಿದೆ. ಆಂಧ್ರದ ನೆಲ್ಲೂರು ಜಿಲ್ಲೆಯ ಕೃಷ್ಣಪಟ್ನಂ ಹಳ್ಳಿಯ ಬಿ. ಆನಂದಯ್ಯ ಅವರು ಈ ಔಷಧಿ ನೀಡುತ್ತಿದ್ದಾರೆ.

ಆದರೆ, ಆನಂದಯ್ಯ ಅವರು ಆಕ್ಸಿಜನ್ ವೃದ್ಧಿಸುವುದಾಗಿ ಹೇಳುವ ಕಣ್ಣಿಗೆ ಹಾಕುವ ಔಷಧಿ ನೀಡದಂತೆ (4ನೇ ಪುಟಕ್ಕೆ)

## 360 ಪಾಸಿಟಿವ್ 818 ಬಿಡುಗಡೆ

ದಾವಣಗೆರೆ, ಮೇ 31- ಜಿಲ್ಲೆ ಯಲ್ಲಿ ಸೋಮವಾರ 360 ಜನರಲ್ಲಿ ಕೊರೊನಾ ಸೋಂಕು ದೃಢ ಪಟ್ಟಿದೆ, ಓರ್ವ ಮಹಿಳೆ ಸಾವನ್ನಪ್ಪಿ, 818 ಜನರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 168, ಹರಿಹರ 65, (5ನೇ ಪುಟಕ್ಕೆ)

## ಜೂನ್ ಅಂತ್ಯದವರೆಗೆ ಲಾಕ್ ವಿಸ್ತರಿಸಿ

**ತಜ್ಞರ ಸಮಿತಿ ಸಲಹೆ**

ಬೆಂಗಳೂರು, ಮೇ 31 - ಲಾಕ್‌ಡೌನ್ ಮತ್ತಷ್ಟು ಸಮಯ ವಿಸ್ತರಿಸಿ, ಜೂನ್ ಅಂತ್ಯದವರೆಗೂ ಕಠಿಣ ಕ್ರಮ ಕೈಗೊಳ್ಳಿ ಎಂದು ತಾಂತ್ರಿಕ ಸಲಹಾ ಸಮಿತಿ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿದೆ.

ರಾಜ್ಯದಲ್ಲಿ ಸೋಂಕು ದಿನದಿಂದ ದಿನಕ್ಕೆ ಇಳಿಕೆ ಕಂಡರೂ, ಪ್ರಸಕ್ತ ಶೇಕಡ 15 ರಷ್ಟು ಪಾಸಿಟಿವಿಟಿ ಕಂಡು ಬರುತ್ತಿದೆ. ಇದರ ಪ್ರಮಾಣ ಶೇಕಡ 5ಕ್ಕೆ ಇಳಿದ ನಂತರ ಲಾಕ್‌ಡೌನ್ ಸಡಿಲಿಸಲು ಮುಂದಿನ ಕ್ರಮ ಕೈಗೊಳ್ಳಿ ಎಂದು ಸಮಿತಿ ಹೇಳಿದೆ.

ಮೈಸೂರು, ಹಾಸನ, ಚಾಮರಾಜನಗರ ಸೇರಿದಂತೆ, ರಾಜ್ಯದ ಏಳು ಜಿಲ್ಲೆಗಳು ಇನ್ನೂ ಡೇಂಜರ್ ಪ್ರದೇಶದಲ್ಲಿವೆ. ಅದನ್ನು ಹೊರತುಪಡಿಸಿದರೆ, 22 ಜಿಲ್ಲೆಗಳಲ್ಲಿ ಸೋಂಕು ಹೆಚ್ಚಿನ (4ನೇ ಪುಟಕ್ಕೆ)


ಹಿರೇತೊಗಲೇರಿ ದಿ|| ದೊಡ್ಡಗೌಡ್ರ ನಾಗಪ್ಪನವರ ಧರ್ಮಪತ್ನಿ

## ಶ್ರೀಮತಿ ಟಿ.ಜಿ. ಸುವರ್ಣಮ್ಮ ನಿಧನ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ, ದಾವಣಗೆರೆ ವಾಸಿ, **ಶ್ರೀಮತಿ ಟಿ.ಜಿ. ಸುವರ್ಣಮ್ಮ** ಇವರು ದಿನಾಂಕ 31.05.2021ರ ಸೋಮವಾರ ಸಂಜೆ 5 ಗಂಟೆಗೆ ಹೃದಯಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ನಾಲ್ಕು ಜನ ಪುತ್ರಿಯರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01.06.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

- ಶ್ರೀಮತಿ ಜ್ಯೋತಿ ಮತ್ತು ವಿರೂಪಾಕ್ಷಪ್ಪ, ನಿವೃತ್ತ ಕಾರ್ಯಪಾಲಕರು (PWD)
- ಶ್ರೀಮತಿ ರೇಖಾ ಮತ್ತು ಶ್ರೀ ಆರ್.ಎಂ. ಪಾಟೀಲ್, ನಿವೃತ್ತ ಮುಖ್ಯ ಪ್ರಬಂಧಕರು, ಬ್ಯಾಂಕ್ ಆಫ್ ಇಂಡಿಯಾ
- ಶ್ರೀಮತಿ ಪುಷ್ಪಾ ಮತ್ತು ಶ್ರೀ ಮಹೇಂದ್ರ, ವಕೀಲರು
- ಶ್ರೀಮತಿ ಜ್ಯೋತಿ ಮತ್ತು ದಿ|| ಟಿ.ಜಿ. ಸಿದ್ದೇಶ್ ಮತ್ತು ಮಕ್ಕಳು
- ಶ್ರೀಮತಿ ವಿಜಯಕುಮಾರಿ ಮತ್ತು ಶ್ರೀ ನರೇಂದ್ರಬಾಬು (M.Sc., Hort.)
- ಶ್ರೀ ಅಣಬೇರು ರಾಜಣ್ಣ ಮತ್ತು ಕುಟುಂಬದವರು, ಅಪೂರ್ವ ಹೋಟೆಲ್,
- ಶ್ರೀ ಜೀವನಪ್ರಕಾಶ್ ಡಿಸಿಸಿ ಬ್ಯಾಂಕ್ ನಿರ್ದೇಶಕರು ಮತ್ತು ಕುಟುಂಬದವರು, ಹಿರೇತೊಗಲೇರಿ
- ಶ್ರೀ ಸದಾಶಿವನಗೌಡ್ರು ಮತ್ತು ಕುಟುಂಬದವರು, ಕತ್ತಲಗೆರೆ.

ಮತ್ತು ಹಿರೇತೊಗಲೇರಿ ದೊಡ್ಡಗೌಡ್ರ ವಂಶಸ್ಥರು ಹಾಗೂ ಗ್ರಾಮಸ್ಥರು.




# ರೈತರ ಬೆಳೆಗಳನ್ನು ನೀವೇ ಕೊಂಡುಕೊಳ್ಳಬೇಕು

## ರಾಣೇಬೆನ್ನೂರಿನಲ್ಲಿ ರಾಜ್ಯ ಸರ್ಕಾರಕ್ಕೆ ಡಿ.ಕೆ.ಶಿವಕುಮಾರ್ ಡಿಮ್ಯಾಂಡ್



ರಾಣೇಬೆನ್ನೂರು, ಮೇ 31- ಎಣ್ಣೆ ಮಾರಾಟಕ್ಕೆ ನಾಲ್ಕು ತಾಸು. ರೈತರ ತರಕಾರಿ, ಕಾಳುಕಡಿ ಮಾರಾಟಕ್ಕೆ ಎರಡು ತಾಸು. ತಂದ ಫಸಲುಗಳ ಗಂಟು ಮೂಟೆ ಬಿಚ್ಚಿ ಅವುಗಳನ್ನು ಜೋಡಿಸಲು ಒಂದು ತಾಸು ಕಳೆಯುತ್ತೆ. ಉಳಿದ ಒಂದು ತಾಸಿನಲ್ಲಿ ರೈತ ತನ್ನ ಫಸಲು ಮಾರಾಟ ಮಾಡಬೇಕು. ಇದು ಸರ್ಕಾರದ ನೀತಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಅವರು ರಾಣೇಬೆನ್ನೂರಿನ ಕಾಂಗ್ರೆಸ್ ಪಕ್ಷ ಕೈಗೊಂಡ ಕೋವಿಡ್ ನಿಯಂತ್ರಣ ಹಾಗೂ ಪರಿಹಾರ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡಿ, ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿದರು.

ನಾಲ್ಕು ತಾಸಿನಲ್ಲಿ ವಿಸ್ಕಿ ಯಾವಾಗಲಾದರು ನಾನು ತೆಗೆದುಕೊಳ್ಳಬಹುದು. ಆದರೆ ರೈತ ಒಂದು ತಾಸಿನಲ್ಲಿ ಮಾರಾಟ ಮಾಡಬೇಕು. ಮಾರಾಟ ಮಾಡಲಾಗದೇ ಕುಳಿತಾಗ ಉಳಿದದ್ದನ್ನು ಬ್ರೋಕರ್‌ಗಳು ಬಂದು ಅಷ್ಟೋ ಇಷ್ಟೋ ಕೊಟ್ಟು ಎತ್ತಿಕೊಂಡು ಹೋಗುತ್ತಾರೆ. ರೈತ ಇಲ್ಲೂ ಶೋಷಣೆಗೆ ಒಳಗಾಗಬೇಕಾಗುತ್ತದೆ. ರೈತರ ಬೆಳೆ ಮಾರಾಟಕ್ಕೆ 8 ತಾಸು ಕೊಡಿ. ಅವರನ್ನ ಫ್ರೀ ಬಿಡಿ ಎಂದ ಡಿಕೆಶಿ, ಇದನ್ನು ನಾನು ರಾಣೇಬೆನ್ನೂರಿನಿಂದ ಸರ್ಕಾರಕ್ಕೆ ಡಿಮ್ಯಾಂಡ್ ಮಾಡುತ್ತೇನೆ ಎಂದರು.

ನಿನ್ನೆ ಹುಬ್ಬಳ್ಳಿ ಧಾರವಾಡ ತಾಲ್ಲೂಕುಗಳಲ್ಲಿ ಬೀದಿ ವ್ಯಾಪಾರಸ್ಥರನ್ನು, ರೈತರನ್ನು ಭೇಟಿ ಮಾಡಿದೆ. ಎಲ್ಲರೂ ತಮ್ಮ ತಮ್ಮ ಗೋಳು ಹೇಳಿಕೊಂಡರು. ಹೂವು ಬೆಳೆಯುವ, ತರಕಾರಿ ಬೆಳೆಯುವವರಿಗೆ ಹೆಕ್ಟೇರ್‌ಗೆ 10 ಸಾವಿರ ಕೊಟ್ಟರೆ, ಗುಂಟೆಗೆ ನೂರು ರೂಪಾಯಿ. ಇದು ಹುಚ್ಚುತನದ ಪರಮಾವಧಿ. ಇದು ಮುಖ್ಯಮಂತ್ರಿಗಳ ಪ್ಯಾಕೇಜ್‌ನ ಕಣ್ಣೊರೆಸುವ ತಂತ್ರ ಎಂದು ಡಿಕೆಶಿ ಅಸಮಾಧಾನ ವ್ಯಕ್ತಪಡಿಸಿದರು.

ಆಮ್ಲಜನಕವಿಲ್ಲದೇ ರಾಜ್ಯದಲ್ಲಿ ಸಾವಿರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಲಸಿಕೆ, ವೆಂಟಿಲೇಟರ್, ಆಕ್ಸಿಜನ್ ಬೆಡ್ ಮುಂತಾದವುಗಳ ಕೊರತೆಯ ಕೂಗು ರಾಜ್ಯಾದ್ಯಂತ ಕೇಳಿಬರುತ್ತಿದೆ. ಒಟ್ಟಾರೆ ಈ ಸರ್ಕಾರ ರಾಜ್ಯದ ಜನರ ಪ್ರಾಣ ರಕ್ಷಣೆಗೆ ಸರಿಯಾದ ಕ್ರಮ ಕೈಗೊಳ್ಳಲೇ ಇಲ್ಲ. ಇದೊಂದು ಬೇಜವಾಬ್ದಾರಿ ಹಾಗೂ ಜನವಿರೋಧಿ ಸರ್ಕಾರ ಎಂದು ಡಿಕೆಶಿ ಹರಿಹಾಯ್ದರು.

ವಿಧಾನ ಪರಿಷತ್ ಸದಸ್ಯ ಆರ್.ಬಿ. ಮಾನೆ, ಮಾಜಿ ಸಚಿವರಾದ ಬಸವರಾಜ ಶಿವಣ್ಣನವರ, ರುದ್ರಪ್ಪ ಲಮಾಣಿ, ಮಾಜಿ ಶಾಸಕ ಬಿ.ಎಚ್. ಬನ್ನಿಕೋಡ, ಜಿ.ಪಂ. ಅಧ್ಯಕ್ಷ ಏಕನಾಥ ಭಾನುವಳ್ಳಿ, ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ್, ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ಡಾ. ಆರ್.ಎಂ. ಕುಬೇರಪ್ಪ, ಪ್ರಕಾಶ ಜೈನ್, ಎಪಿಎಂಸಿ, ನಗರ ಸಭೆ ಸದಸ್ಯರು ಸೇರಿದಂತೆ ಇನ್ನಿತರೆ ಮುಖಂಡರುಗಳಿದ್ದರು.

### ಪ್ರವಾಸ ನಿರಂತರ...

ಇಲ್ಲಿಗೆ ನನ್ನ ಪ್ರವಾಸ ನಿಲ್ಲುವುದಿಲ್ಲ, ರಾಜ್ಯದ ಎಲ್ಲೆಡೆ ತೆರಳುತ್ತೇನೆ. ಕೋವಿಡ್ ವಿರುದ್ಧದ ಸಮರಕ್ಕೆ ಪಕ್ಷದ ಕಾರ್ಯಕರ್ತರು ಸದಾ ನಿರತರಾಗಿದ್ದಾರೆ. ಪ್ರತಿ ಮನೆಗೂ ತೆರಳಿ ಲಸಿಕೆ ಹಾಕಿಸುವ ಕೆಲಸ ಆಗುತ್ತಿದೆ. ಜನರ ಜೀವ ರಕ್ಷಣೆಗೆ ಕಾಂಗ್ರೆಸ್ ಕಾರ್ಯಕರ್ತರು ಸಜ್ಜಾಗಿದ್ದಾರೆ. ಅವರ ಈ ಜನಪರ ಕೆಲಸಕ್ಕೆ ಪಕ್ಷ ಬೆಂಗಾವಲಾಗಿದೆ ಎಂದು ಡಿಕೆಶಿ ಹೇಳಿದರು.

### ಪ್ರಕಾಶ್ ಕೋಳಿವಾಡ ಕಾರ್ಯಕ್ಕೆ ಮೆಚ್ಚುಗೆ...

ರಾಣೇಬೆನ್ನೂರು ಕ್ಷೇತ್ರದಲ್ಲಿ ನಮ್ಮ ಶಾಸಕರಿಲ್ಲ. ಆದಾಗ್ಯೂ ಮಾಜಿ ಸ್ಪೀಕರ್ ಕೋಳಿವಾಡ ಅವರ ಪುತ್ರ ಪ್ರಕಾಶ್ ಎಲ್ಲ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಆರೈಕೆಗೆ ಬಸ್, ಜೊತೆಗೆ ಸೋಂಕಿತರಿಗೆ ಅವರ ಜೊತೆಗಾರರಿಗೆ ಊಟದ ವ್ಯವಸ್ಥೆ ಮಾಡಿದ್ದಾರೆ. ಈ ಕ್ಷೇತ್ರದ ಜನರ ಜೊತೆಯಾಗಿ ಕಾಂಗ್ರೆಸ್ ಪಕ್ಷ ಕಾರ್ಯನಿರ್ವಹಿಸುತ್ತಿದೆ ಎಂದು ಡಿಕೆಶಿ ಮೆಚ್ಚುಗೆ ವ್ಯಕ್ತಪಡಿಸಿದರು.

# ಎಲ್ಲಾ ತಾಲ್ಲೂಕಿಗೂ ಸಮಾನ ಸೌಲಭ್ಯ

(1ನೇ ಪುಟದಿಂದ) ನೀಡಲಾಗಿದೆ. ಅವರೂ ಸಹ ಹಗಲು, ರಾತ್ರಿ ಎನ್ನದೆ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಯಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಮತ್ತು ಆರೋಗ್ಯ ಇಲಾಖೆಯ ಜಿಲ್ಲಾ ಅಧೀಕ್ಷಕರಿಗೆ ಮತ್ತು ತಾಲ್ಲೂಕು ಅಧೀಕ್ಷಕರಿಗೆ ಸೌಲಭ್ಯಗಳ ಕೊರತೆ ಬರದಂತೆ ನೋಡಿಕೊಳ್ಳಲು ಸೂಚನೆ ನೀಡಲಾಗಿದೆ ಎಂದರು.

ಕೊರೊನಾ ರೋಗದಿಂದ ಮರಣ ಹೊಂದಿದವರ ಸಂಖ್ಯೆಯನ್ನು ಮುಚ್ಚಿಟ್ಟರೆ ನಮಗೆ ಕಿರೀಟ ಬರುವುದಿಲ್ಲ. ಕೊರೊನಾ ರೋಗವು ಪ್ರತಿದಿನ ಎಷ್ಟು ಜನರಿಗೆ ಹರಡುತ್ತಿದೆ ಮತ್ತು ಎಷ್ಟು ಜನರು ಮರಣವನ್ನು ಹೊಂದಿದರು ಎಂಬುದರ ಬಗ್ಗೆ ಪ್ರತಿನಿತ್ಯವೂ ರಾಜ್ಯದ ಆರೋಗ್ಯ ಇಲಾಖೆಯು ಸಂಪೂರ್ಣವಾಗಿ ಮಾಹಿತಿಯನ್ನು ನೀಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ನಾವು ಇಂತಹ ಸಮಯದಲ್ಲಿ ರಾಜಕಾರಣ ಮಾಡುವುದು ಸೂಕ್ತವಲ್ಲ. ಸಾರ್ವಜನಿಕರಿಗೆ ಏನು ತೊಂದರೆ ಆಗುತ್ತಿದೆಯೋ ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಜನರ ಪ್ರಾಣವನ್ನು ರಕ್ಷಣೆ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲೆ ಹೆಚ್ಚು ಇರುತ್ತದೆ. ಅದಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಿಂದಿನ ಉಸ್ತುವಾರಿ ಸಚಿವರು ಮಾಡದ ಕೆಲಸವನ್ನು ನಾನು ಮಾಡುತ್ತಿದ್ದು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಬಳಿ ದಾವಣಗೆರೆ ಜಿಲ್ಲೆಯ ಸಮಸ್ಯೆಗಳನ್ನು ಪರಿಹರಿಸಲು ತಿಳಿಸಲಾಗಿದೆ. ದಾವಣಗೆರೆ ಸಿಜಿ ಆಸ್ಪತ್ರೆಯನ್ನು ಹೊಸದಾಗಿ ಕಟ್ಟಲು 200 ಕೋಟಿ ಬಿಡುಗಡೆ ಮಾಡುವಂತೆ ಮನವಿಯನ್ನು ಮಾಡಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅದೂ ಕೂಡಾ ಆಗಲಿದೆ ಎಂದರು.

ಸರ್ಕಾರ ಇತ್ತೀಚೆಗೆ ವಿಶೇಷವಾಗಿ ತಜ್ಞ ವೈದ್ಯರ ಮತ್ತು ಸರ್ಜನ್‌ಗಳ ನೇಮಕಾತಿ ಮಾಡುವುದಕ್ಕೆ ಆದೇಶವನ್ನು ನೀಡಿದೆ. ಅದರಂತೆ ಖಾಸಗಿ ವೈದ್ಯರು ಸೇವೆಯನ್ನು ಮಾಡಲು ಮುಂದೆ ಬಂದರೆ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಹೇಳಿದರು. ಹರಿಹರ ತಾಲ್ಲೂಕಿನಲ್ಲಿ ಅಕ್ರಮ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ನಮಗೆ ದಾಖಲೆ ಸಮೇತ ನೀಡಿದರೆ ಹಿಂದೆ ಮುಂದೆ ನೋಡದೆ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ತಾಲ್ಲೂಕಿನಲ್ಲಿ ವೃದ್ಧಾಪ್ಯ ವೇತನ ಬಿಡುಗಡೆ ಮಾಡುವುದಕ್ಕೆ ಪ್ಲಾನಿಂಗ್ ಸೆಕ್ಟರ್ ಕಾರ್ಯದರ್ಶಿಯವರ ಬಳಿ ಚರ್ಚೆ ಮಾಡಲಾಗಿದೆ ಇನ್ನೂ ಸ್ವಲ್ಪ ದಿನದಲ್ಲಿ ವೃದ್ಧಾಪ್ಯ ವೇತನವನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ ಮಾತನಾಡಿ, ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ಶಾಸಕ ಎಸ್. ರಾಮಪ್ಪನವರು ಹೇಳಿದರೆ ಸಾಲದು ಯಾರು ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೋ ಅವರ ಮೇಲೆ ಪ್ರಕರಣ ದಾಖಲಿಸಬೇಕು. ಅದನ್ನು ಬಿಟ್ಟು ಆರೋಪಗಳನ್ನು ಮಾಡುವುದು ಸರಿಯಲ್ಲ ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ನಾಗರಾಜ್ ಮಾತನಾಡಿ, ಹರಿಹರ ತಾಲ್ಲೂಕಿನಲ್ಲಿ ಒಂದು ಆಕ್ಸಿಜನ್ ಕೇಂದ್ರವನ್ನು ತೆರೆಯಲಾಗುತ್ತದೆ ಎಂದು ತಿಳಿಸಲಾಗಿತ್ತು. ಅದರಂತೆ ನಾಳೆ ಅಥವಾ ನಾಡಿದ್ದು ಗುದ್ದಲಿ ಪೂಜೆಯನ್ನು ಸಚಿವ ಭೈರತಿ ಬಸವರಾಜ್, ಸಂಸದರಾದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್. ರಾಮಪ್ಪ ಮಾಡಲಿದ್ದಾರೆ. 70 ಲಕ್ಷ ರೂಪಾಯಿ ವೆಚ್ಚದ 20×30 ಅಳತೆ ಜಾಗದಲ್ಲಿ ಆಕ್ಸಿಜನ್ ಪ್ಲಾಂಟ್ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ಜಿಲ್ಲಾ ಆರೋಗ್ಯ ನೋಡಲ್ ಅಧಿಕಾರಿ ನಟರಾಜ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಆಸ್ಪತ್ರೆ ಆಡಳಿತಾಧಿಕಾರಿ ಡಾ. ಹನುಮನಾಯ್ಕ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಪೌರಾಯುಕ್ತೆ ಎಸ್. ಲಕ್ಷ್ಮಿ, ತಾ.ಪಂ. ಇಓ ಗಂಗಾಧರನ್, ಕೆ.ಜಿ. ಕೃಷ್ಣ ಇನ್ನಿತರರು ಹಾಜರಿದ್ದರು.

# ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್‌ನಿಂದ ಜನರಿಗೆ ಆಕ್ಸಿಜನ್ ಕಾನ್ಸಂಟ್ರೇಟರ್ ಸೌಲಭ್ಯ



ಹರಪನಹಳ್ಳಿ, ಮೇ 31- ಕಳೆದ 2 ವರ್ಷಗಳ ಅವಧಿಯಲ್ಲಿ ಕೋವಿಡ್ ಸೋಂಕಿನಿಂದ ಸಾವು-ನೋವುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕೋವಿಡ್ ಅಲೆಯಲ್ಲಿ ಆಹಾರ ಧಾನ್ಯಗಳ ವಿತರಣೆ, ಆಂಬ್ಯುಲೆನ್ಸ್ ಸಹಾಯವಾಣಿ, ವೈದ್ಯಕೀಯ ಕಿಟ್, ಆಕ್ಸಿಜನ್ ವಿತರಣೆ ಮಾಡುವ ಮೂಲಕ ನಮ್ಮ ಅಳಿಲು ಸೇವೆ ಮಾಡುತ್ತಿದ್ದೇವೆ ಎಂದು ಶ್ರೀ ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಎಂ.ಪಿ.ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ಆಚಾರ್ಯ ಬಡಾವಣೆಯಲ್ಲಿರುವ ತಮ್ಮ ಕಛೇರಿಯಲ್ಲಿ ಎಂ.ಪಿ. ಪ್ರಕಾಶ ಸಮಾಜಮುಖಿ ಟ್ರಸ್ಟ್, ಫಲದ ಆಗ್ರೋ ರಿಸರ್ಚ್ ಫೌಂಡೆಷನ್ ಪ್ರೈಲಿ, ಫಲದಾಯಿ ಫೌಂಡೇಷನ್ ಮತ್ತು ಜರ್ಮನ್ ಸಂಸ್ಥೆವತಿಯಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಉಚಿತ ಪೂರೈಕೆ ಹಾಗೂ ಪತ್ರಕರ್ತರಿಗೆ ಧವಸ-ಧಾನ್ಯ ಹಾಗೂ ಮಾಸ್ಕ್ ವಿತರಣೆ ಮಾಡಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಆಕ್ಸಿಜನ್ ಪ್ರಮಾಣದಲ್ಲಿ ವ್ಯತ್ಯಾಸವಿರುವ ಸೋಂಕಿತರಿಗೆ ಚಿಕಿತ್ಸೆ ನೀಡಲು ಸಹಕಾರಿಯಾಗುವುದು. ಶ್ರೀ ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ನಿರಂತರವಾಗಿ ಫಲದ ಆಗ್ರೋ ಸಂಸ್ಥೆ ಜೊತೆಗೆ ರೈತರೊಂದಿಗೆ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಾ ಬಂದ ಹಿನ್ನೆಲೆಯಲ್ಲಿ ಫಲದ ಸಂಸ್ಥೆ ಜೊತೆ ಸಂಪರ್ಕ ಹೊಂದಿರುವ ವಿದೇಶಿ ಕಂಪನಿಗಳ ಪ್ರತಿನಿಧಿಗಳು ನಮ್ಮ ರೈತರ ಹೊಲಗಳಿಗೆ ಪ್ರತಿ ವರ್ಷ ಭೇಟಿ ನೀಡುತ್ತಾ ಬಂದಿದ್ದರು. ಫಲದ ಆಗ್ರೋ ಸಂಸ್ಥೆ ಜೊತೆ ಸಂಪರ್ಕ ಹೊಂದಿದ ಜರ್ಮನ್ ಸಂಸ್ಥೆಗಳಾದ ಲಾಟಾವು ಮತ್ತು ಡಿ.ಎಂ. ಮಾರ್ಕೆಟಿಂಗ್ ಸಂಸ್ಥೆಗಳು ಆಮ್ಲಜನಕ ಸಾಂದ್ರಕ ಯಂತ್ರಗಳನ್ನು ಫಲದ ಸಂಸ್ಥೆಗೆ ನೀಡಿವೆ ಎಂದರು.

ಫಲದ ಆಗ್ರೋ ರಿಸರ್ಚ್ ಫೌಂಡೇಷನ್‌ನ ಅಧ್ಯಕ್ಷ ಸಿ.ಎಂ.ಎನ್.ಶಾಸ್ತ್ರಿ ಮಾತನಾಡಿ, ಕಳೆದ 21 ವರ್ಷಗಳಿಂದ ನಮ್ಮ ಸಂಸ್ಥೆ ಸಂಪೂರ್ಣ ಸಾವಯವ ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸಲಾಗುತ್ತಿದೆ. ಸಾವಯವ ಕೃಷಿಗೆ ಉತ್ತೇಜನ ನೀಡಲು ರೈತರ ಗುಂಪುಗಳನ್ನು ಮಾಡಿ, ಅವರಿಗೆ ತರಬೇತಿ ನೀಡುವ ಮೂಲಕ ಉತ್ತಮ ರೈತರನ್ನಾಗಿ ಮಾಡುವ ಗುರಿ ನಮ್ಮದಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಆಕ್ಸಿಜನ್ ಕೊರತೆ ಇದ್ದವರಿಗೆ ಇದರ ಸದುಪಯೋಗವಾಗಲಿ ಎಂದು ಎರಡು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಕೊಡುಗೆಯಾಗಿ ನೀಡಲಾಗಿದೆ ಎಂದರು.

ಕೆಪಿಸಿಸಿ ವೈದ್ಯಕೀಯ ಘಟಕದ ಉಪಾಧ್ಯಕ್ಷ ಡಾ.ಮಹಂತೇಶ್ ಚರಂತಿಮಠ, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ನ್ಯಾಯವಾದಿ ಸಿದ್ದಲಿಂಗನಗೌಡ, ದಾದಾಪೀರ್, ಗಾಯಿತ್ರಮ್ಮ, ತಿಮ್ಮಲಾಪುರದ ನಾಗರಾಜ, ಸಚಿನ್ ಸೇರಿದಂತೆ ಇತರರು ಇದ್ದರು.

# ಕೊವಿನ್ ನೋಂದಣಿ: ಸುಪ್ರೀಂ ಆಕ್ಷೇಪ

ನವದೆಹಲಿ, ಮೇ 31 – ಕೊರೊನಾ ಲಸಿಕೆ ಪಡೆಯಲು ಕೊವಿನ್ ಆಪ್ ನೋಂದಣಿ ಕಡ್ಡಾಯಗೊಳಿಸಿ ರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ನಿಜವಾದ 'ಡಿಜಿಟಲ್ ಇಂಡಿಯಾ' ಪರಿಸ್ಥಿತಿ ಅರಿಯದೇ ನೀತಿ ರೂಪಿಸಲಾಗಿದೆ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್.ಎನ್. ರಾವ್ ಹಾಗೂ ಎಸ್. ರವೀಂದ್ರಭಟ್ ಅವರನ್ನು ಒಳಗೊಂಡ ಪೀಠ ಕೊವಿನ್ ಕಡ್ಡಾಯದ ಬಗ್ಗೆ ಆಕ್ಷೇಪಿಸಿದ್ದು, ನೀತಿ ರೂಪಿಸುವವರು ಬೇರು ಮಟ್ಟದ ವಾಸ್ತವಿಕತೆ ಅರಿತಿರಬೇಕು ಎಂದು ಹೇಳಿದೆ.

ಡಿಜಿಟಲ್ ಇಂಡಿಯಾ ಎಂದು ನೀವು ಹೇಳುತ್ತಲೇ ಇರುತ್ತೀರಿ. ಆದರೆ, ಗ್ರಾಮೀಣ ಭಾಗದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಜಾರ್ಖಂಡ್‌ನ ಅನಕ್ಷರಸ್ಥ ಕಾರ್ಮಿಕ ರಾಜಸ್ಥಾನದಲ್ಲಿ ಹೇಗೆ ನೋಂದಣಿ ಮಾಡಲು ಸಾಧ್ಯ? ಈ ಡಿಜಿಟಲ್ ಅಂತರವನ್ನು ಹೇಗೆ ನಿವಾರಿಸುತ್ತೀರಿ ಎಂದು ಪೀಠವು ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಅವರಿಗೆ ಪ್ರಶ್ನಿಸಿದೆ.

ಈ ಬಗ್ಗೆ ಉತ್ತರಿಸಿದ ಮೆಹ್ತ, ಎರಡನೇ ಡೋಸ್ ಪಡೆಯುವ ಅಗತ್ಯವಿರುವ ಕಾರಣದಿಂದಾಗಿ ನೋಂದಣಿ ಕಡ್ಡಾಯವಾಗಿದೆ. ಗ್ರಾಮೀಣ ಭಾಗಗಳಲ್ಲಿ ಸಮುದಾಯ ಕೇಂದ್ರಗಳಿದ್ದು, ಅಲ್ಲಿ ಜನರು ನೋಂದಣಿ ಮಾಡಿಕೊಳ್ಳಬಹುದು ಎಂದರು.

ಈ ವ್ಯವಸ್ಥೆ ಕಾರ್ಯಸಾಧುವೇ? ಎಂದು ಕೇಳಿದ ನ್ಯಾಯಾಲಯ, ಈ ನೀತಿಯ ಕುರಿತ ದಾಖಲೆಗಳನ್ನು ಸಲ್ಲಿಸುವಂತೆ ಹೇಳಿತು.

ಕೇಂದ್ರ ಸರ್ಕಾರದ ಕೋವಿಡ್ ನಿರ್ವಹಣೆ ಕುರಿತು ಸ್ವಯಂ ಪ್ರೇರಿತ ವಿಚಾರಣೆ ನಡೆಸುವ ವೇಳೆ, ಕೇಂದ್ರ ಸರ್ಕಾರದ ಲಸಿಕಾ ಖರೀದಿ ನೀತಿಯನ್ನೂ ಪ್ರಶ್ನಿಸಿರುವ ನ್ಯಾಯಾಲಯ, ಪಂಜಾಬ್ ಹಾಗೂ ದೆಹಲಿಗಳು ವಿದೇಶಿ ಲಸಿಕೆಗಳಿಗಾಗಿ ಜಾಗತಿಕ ಟೆಂಡರ್ ಕರೆಯುತ್ತಿವೆ. ಮುಂಬೈ ಮಹಾನಗರ ಪಾಲಿಕೆ ಸಹ ಟೆಂಡರ್ ಕರೆದಿದೆ ಎಂದು ಆಕ್ಷೇಪಿಸಿದೆ.

ರಾಜ್ಯ ಇಲ್ಲವೇ ನಗರ ಪಾಲಿಕೆಗಳು ಲಸಿಕೆ ಪಡೆಯಬೇಕು ಎಂಬುದು ಕೇಂದ್ರ ಸರ್ಕಾರದ ನೀತಿಯೇ? ನೋಡಲ್ ಸಂಸ್ಥೆಯ ರೀತಿಯಲ್ಲಿ ಕೇಂದ್ರ ಸರ್ಕಾರ ಲಸಿಕೆ ಖರೀದಿಸಲಿದೆಯೇ? ಈ ಬಗ್ಗೆ ನಮಗೆ ಸ್ಪಷ್ಟನೆ ಬೇಕಿದೆ ಹಾಗೂ ಈ ನೀತಿಯ ಔಚಿತ್ಯದ ಕುರಿತು ತಿಳಿಯಬೇಕಿದೆ ಎಂದು ಪೀಠ ಹೇಳಿದೆ.

2021ರ ಒಳಗೆ ಇಡೀ ದೇಶದ ಅರ್ಹ ಜನಸಮುದಾಯಕ್ಕೆ ಲಸಿಕೆ ನೀಡಲಾಗುವುದು ಎಂದು ಹೇಳಿರುವ ಮೆಹ್ತ, ಫೈಜರ್ ರೀತಿಯ ಕಂಪನಿಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಇದು ಯಶಸ್ವಿಯಾದರೆ, ಲಸಿಕಾ ವೇಳಾಪಟ್ಟಿ ಬದಲಾಗಲಿದೆ ಎಂದಿದ್ದಾರೆ.



# ಕೊರೊನಾ ಖರೀದಿ..?

ಅಡುಗೆ ಎಣ್ಣೆ ಖರೀದಿಸಲು ಎಣ್ಣೆ ಅಂಗಡಿ ಮುಂದೆ ಸರದಿ ಸಾಲಿನಲ್ಲಿ ನಿಂತ ಗ್ರಾಹಕರು

(1ನೇ ಪುಟದಿಂದ) ನಡೆಯುತ್ತಿದ್ದವು. ಪರಿಣಾಮ ವಾಹನಗಳ ಸಂಖ್ಯೆ ಹೆಚ್ಚಾಗಿ ಜನರು ಮಾರುಕಟ್ಟೆಯಿಂದ ಹೊರ ಬರಲು ಸಾಕಷ್ಟು ಪರಿಶ್ರಮ ಪಡಬೇಕಾಗಿತ್ತು.

**ನೋ ಸ್ಟಾಕ್ :** ಹಲವು ದಿನಗಳಿಂದ ಮಾರಲು ಬೇಕಾದ ವಸ್ತುಗಳನ್ನು ತರಿಸಲು ಸಾಧ್ಯವಾಗದ ಕಾರಣ ಬಹುತೇಕ ಅಂಗಡಿಗಳಲ್ಲಿ ದಿನಸಿ ವಸ್ತುಗಳು ಖಾಲಿಯಾಗಿದ್ದವು. ಬೇಕಾದ ವಸ್ತುಗಳನ್ನು ಜನರು ಹುಡುಕಿಕೊಂಡು ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿತ್ತು.

**ದರ ಏರಿಕೆ:** ಇದ್ದ ಕಡಿಮೆ ದಾಸ್ತಾನಿಗೆ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಕೆಲ ಅಂಗಡಿ ಮಾಲೀಕರು ಹೆಚ್ಚು ದರಕ್ಕೆ ಮಾರಾಟ ಮಾಡಿದ ಪ್ರಸಂಗಗಳೂ ನಡೆದವು. ದರ ಹೆಚ್ಚಾದರೂ ಪರವಾಗಿಲ್ಲ. ಸಿಕ್ಕರೆ ಸಾಕು ಎಂಬಂತೆ ಗ್ರಾಹಕರು ಖರೀದಿಗೆ ಮುಗಿ ಬಿದ್ದಿದ್ದರು.

**ಎಣ್ಣೆ ಅಂಗಡಿಗೆ ಸರದಿ ಸಾಲು:** ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಅಡುಗೆ ಎಣ್ಣೆ ವಿತರಿಸುವ ಅಂಗಡಿಗಳ ಮುಂದೆ ಎಣ್ಣೆಗಾಗಿ ಗ್ರಾಹಕರು ಸರದಿ ಸಾಲಿನಲ್ಲಿ ನಿಂತು ಖರೀದಿಸುತ್ತಿದ್ದುದು ಕಂಡು ಬಂತು. ಮನೆಗಳಿಗೆ ಬಳಕೆ ಮಾಡುವವರು ಹಾಗೂ ದಿನಸಿ ಅಂಗಡಿಗಳಿಗೆ ಕೊಂಡೊಯ್ಯುವವರು ಏಕಕಾಲದಲ್ಲಿಯೇ ಆಗಮಿಸಿದ್ದರಿಂದ ಸರದಿಯಲ್ಲಿ ನಿಲ್ಲಬೇಕಾಗಿತ್ತು. ಚಿಪ್ಸ್, ಕುರ್ ಕುರೆ ಯಂತಹ ವಸ್ತುಗಳನ್ನು ಮಾರುವ ಅಂಗಡಿಗಳ ಮುಂದೆಯೂ ಗ್ರಾಹಕರು ಸರದಿಯಲ್ಲಿ ನಿಂತಿದ್ದುದು ಕಂಡು ಬಂತು.

**ಬ್ಯಾರಿಕೇಡ್ ಸಮಸ್ಯೆ:** ಕಳೆದೊಂದು ವಾರ ಪೂರ್ತಿ ಲಾಕ್‌ಡೌನ್ ಮಾಡಿದ್ದರಿಂದ ಅನಗತ್ಯ ಓಡಾಟ ನಿಯಂತ್ರಿಸಲು ಮಾರುಕಟ್ಟೆ ಪ್ರದೇಶದ ಬಹುತೇಕ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. ಆದರೆ ಸೋಮವಾರ ರೇಣುಕಾಮಂದಿರದ ಪಕ್ಕದ ರಸ್ತೆ, ಬಿನ್ನಿ ಕಂಪನಿ ರಸ್ತೆ ಸೇರಿದಂತೆ ಬೆರಳೆಣಿಕೆ ರಸ್ತೆಗಳಲ್ಲಿ ಮಾತ್ರ ಬ್ಯಾರಿಕೇಡ್ ತೆರವು ಮಾಡಲಾಗಿತ್ತು. ಪರಿಣಾಮ ಜನತೆ ಊರೆಲ್ಲಾ ಸುತ್ತಿಕೊಂಡು ಮಾರುಕಟ್ಟೆ ಪ್ರವೇಶಿಸಬೇಕಾಗಿತ್ತು. ಇನ್ನು ಹೊರ ಬರುವಾಗಂತೂ ವಾಹನ ದಟ್ಟಣೆ ಹೆಚ್ಚಾಗಿದ್ದರಿಂದ ತೀವ್ರ ಸಮಸ್ಯೆ ಎದುರಿಸಿದರು. ಸಾಮಗ್ರಿ ಹೊತ್ತುಕೊಂಡು ಕಿಲೋಮೀಟರ್ ದೂರ ಕೆಲವರು ನಡೆದು ಸಾಗಬೇಕಾಗಿತ್ತು. ಒಂದಡೆ ಜನರ ಹಾಗೂ ವಾಹನ ದಟ್ಟಣೆ ಸಮಸ್ಯೆ, ಮತ್ತೊಂದೆಡೆ ಅಡ್ಡಡ್ಡ ಬ್ಯಾರಿಕೇಡ್‌ಗಳು. ಒಟ್ಟಾರೆ ಮಾರುಕಟ್ಟೆ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತವಾಗಿತ್ತು.

**ತಹಶೀಲ್ದಾರ್ ಭೇಟಿ:** ತಹಶೀಲ್ದಾರ್ ಗಿರೀಶ್ ಮುಂಜಾನೆ ಕೆ.ಆರ್. ಮಾರುಕಟ್ಟೆ ಪ್ರದೇಶಕ್ಕೆ ಭೇಟಿ ನೀಡಿದರು. ಸಾಮಾಜಿಕ ಅಂತರ ಕಾಯ್ದುಕೊಂಡು ವ್ಯವಹಾರ ಮಾಡುವಂತೆ ಜನತೆಗೆ ಮನವಿ ಮಾಡಿದರು.

ಮಾರುಕಟ್ಟೆ ಅಷ್ಟೇ ಅಲ್ಲದೆ ನಗರದ ಪ್ರಮುಖ ರಸ್ತೆಗಳಲ್ಲೂ ಬೆಳಿಗ್ಗೆ ತರಕಾರಿ ಹಾಗೂ ಹಣ್ಣಿನ ಗಾಡಿಗಳು ಸಾಲುಗಟ್ಟಿ ನಿಂತಿದ್ದವು. ಜನತೆ ಅಂತರ ಮರೆತು ಖರೀದಿಸಿದರು. 12 ಗಂಟೆಯಾಗುತ್ತಲೇ ಜನರು ಮನೆಗಳಿಗೆ ಮರಳತೊಡಗಿದರು. ಮಂಗಳವಾರ ಹಾಗೂ ಬುಧವಾರ ಸಂಪೂರ್ಣ ಲಾಕ್‌ಡೌನ್ ಇದ್ದು, ಗುರುವಾರ ಮತ್ತೆ 6 ರಿಂದ 12ರವರೆಗೆ ಖರೀದಿಗೆ ಅವಕಾಶ ನೀಡಲಾಗಿದೆ.

# ಮುರುಘಾರಾಜೇಂದ್ರ ಶಾಲೆಯ ಮುಖ್ಯೋಪಾಧ್ಯಾಯ ಪ್ರಕಾಶ್ ನಿವೃತ್ತಿ



ದಾವಣಗೆರೆ, ಮೇ 31 - ನಗರದ ಶಿಬಾರ ಬಳಿಯ ಶ್ರೀ ಮುರುಘರಾಜೇಂದ್ರ ಹಿರಿಯ ಪ್ರಾಥಮಿಕ ಪಾಠಶಾಲೆಯ ಮುಖ್ಯೋಪಾಧ್ಯಾಯ ಆರ್.ಡಿ. ಪ್ರಕಾಶ್ ಅವರು ವಯೋನಿವೃತ್ತಿ ಹೊಂದಿರುವ ಪ್ರಯುಕ್ತ ಅವರಿಗೆ ಸರಳ ಬೀಳ್ಕೊಡುಗೆ ಸಮಾರಂಭವನ್ನು ಇಂದು ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಾಲಾ ಆಡಳಿತ ಮಂಡಳಿಯವರು ಮತ್ತು ಶಿಕ್ಷಕರು ಮತ್ತು ಶಿಕ್ಷಕೇತರ ವರ್ಗದವರು ಪ್ರಕಾಶ್ ಅವರನ್ನು ಅಭಿನಂದಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಕೊಟ್ರೇಶ್ ಅವರು, ಪ್ರಕಾಶ್ ಅವರಿಗೆ ಸನ್ಮಾನಿಸಿ ಬೀಳ್ಕೊಟ್ಟರು. ಶಿಕ್ಷಕರ ಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರುಗಳು ಪ್ರಕಾಶ್ ಅವರ ತಮ್ಮ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

# ಚಾಲಕರಿಗಾಗಿ ಸಹಾಯವಾಣಿ

ಬೆಂಗಳೂರು, ಮೇ 31 - ಕೋವಿಡ್ ಪಿಡುಗನ್ನು ತಡೆಯುವ ಪ್ರಯತ್ನದ ಅಂಗವಾಗಿ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ಸಾರಿಗೆ ಸೇವೆ, ಆಂಬ್ಯುಲೆನ್ಸ್ ಸೇವೆ ಮತ್ತು ಚಾಲಕರಿಗೆ ಸರ್ಕಾರ ಘೋಷಿಸಿರುವ ಪರಿಹಾರ ಇತ್ಯಾದಿಗಳ ಕುರಿತಂತೆ ಯಾವುದೇ ಸಮಸ್ಯೆಗಳಿದ್ದರೂ ಕೂಡಲೇ ಸ್ಪಂದಿಸಲು ಅನುಕೂಲವಾಗುವಂತೆ ಸಾರಿಗೆ ಇಲಾಖೆಯಿಂದ ಪ್ರತ್ಯೇಕ ಸಹಾಯವಾಣಿಯನ್ನು ಪ್ರಾರಂಭಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಈ ಸಹಾಯವಾಣಿಯ ನಂಬರ್ 9449 86 3214 ಆಗಿದ್ದು, ಸಾರಿಗೆ ಸೇವೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಅಥವಾ ಕುಂದುಕೊರತೆಗಳಿದ್ದಲ್ಲಿ ಸಾರ್ವಜನಿಕರು ಈ ಸಹಾಯವಾಣಿಯನ್ನು ಸಂಪರ್ಕಿಸಿ ಉಪಯೋಗ ಪಡೆದುಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ರೋಗದಿಂದ ತೊಂದರೆಗೆ ಒಳಗಾಗಿರುವ ಸೋಂಕಿತರಿಗೆ ಅನುಕೂಲವಾಗುವ ದೃಷ್ಟಿಯಿಂದ ಆಂಬ್ಯುಲೆನ್ಸ್ ಸೇವೆಗೂ ಸರ್ಕಾರ ಸೂಕ್ತ ದರವನ್ನು ನಿಗದಿಪಡಿಸಿದೆ. ಆ ಪ್ರಕಾರವೇ ಆಂಬ್ಯುಲೆನ್ಸ್ ಸೇವೆಗೆ ಅಂಬುಲೆನ್ಸ್ ವಾಹನಗಳ ಮಾಲೀಕರು ದರ ವಿಧಿಸಬೇಕಾಗಿದೆ. ಆದರೆ ಕೆಲವು ಪ್ರಕರಣಗಳಲ್ಲಿ ಆಂಬ್ಯುಲೆನ್ಸ್ ಸೇವೆಗೆ ಸಾರ್ವಜನಿಕರಿಂದ ಅಧಿಕ ಶುಲ್ಕ ಸಂಗ್ರಹಿಸುತ್ತಿರುವ ಆರೋಪಗಳು ಕೇಳಿಬಂದಿವೆ, ಇದು ಸರಿಯಲ್ಲ. ಒಂದು ವೇಳೆ ಸರ್ಕಾರದ ನಿಗದಿಪಡಿಸಿರುವ ದರಕ್ಕಿಂತಲೂ ಹೆಚ್ಚು ಹಣವನ್ನು ಯಾರೇ ಸಂಗ್ರಹಿಸಿ ನಿಯಮ ಉಲ್ಲಂಘಿಸಿದರೂ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಸವದಿ ಅವರು ಎಚ್ಚರಿಕೆ ನೀಡಿದ್ದಾರೆ.

### ಕುಂಬಳೂರು ಶ್ರೀಮತಿ ದೇವಿಕ ಕೆ.ವಿ. ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವಾಸಿ ಕರಿಯಪ್ಪರ ವೇದಮೂರ್ತಿಯವರ ಧರ್ಮಪತ್ನಿ

**ಶ್ರೀಮತಿ ದೇವಿಕ ಕೆ.ವಿ**

ಇವರು ದಿನಾಂಕ 31.05.2021ರ ಸೋಮವಾರ ಮಧ್ಯ ರಾತ್ರಿ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.05.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕುಂಬಳೂರಿನ ರುದ್ರಭೂಮಿಯಲ್ಲಿ ನೆರವೇರಿತು.

**ದುಃಖತಪ್ತ ಕುಟುಂಬ ವರ್ಗ**

**99860 37814, 94489 24370**

### ಜಿಗಳಿ ಗ್ರಾಮದ ಎಕ್ಕೆಗೊಂದಿ ಬಸಮ್ಮ ನಿಧನ




ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ವಾಸಿ ಎಕ್ಕೆಗೊಂದಿ ಶೇಖರಪ್ಪ ಅವರ ಧರ್ಮಪತ್ನಿ

**ಶ್ರೀಮತಿ ಬಸಮ್ಮ**

(70 ವರ್ಷ) ಇವರು ದಿನಾಂಕ 31.05.2021ರ ಸೋಮವಾರ ಬೆಳಗಿನ ಜಾವ ನಿಧನರಾದರು. ಪತಿ, ಪುತ್ರರಾದ ನಿವೃತ್ತ ಸೈನಿಕ ಎಕ್ಕೆಗೊಂದಿ ಸುಭಾಷ್ ಹಾಗೂ ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.5.2021ರ ಸೋಮವಾರ ಮಧ್ಯಾಹ್ನ ಜಿಗಳಿಯಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.


**ಇಂತಿ ದುಃಖತಪ್ತ ಕುಟುಂಬವರ್ಗ**

### ಶ್ರೀಮತಿ ಉಚ್ಚೆಂಗಮ್ಮ ನಿಧನ



ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆ ಶ್ಯಾಗಲೆ ಗ್ರಾಮದ ವಾಸಿ ಶ್ರೀಮತಿ ಉಚ್ಚೆಂಗಮ್ಮ (42)ಇವರು ದಿನಾಂಕ : 30.05.2021ರ ಭಾನುವಾರ ಬೆಳಿಗ್ಗೆ 7.30 ಗಂಟೆಗೆ ನಿಧನರಾಗಿರುತ್ತಾರೆ. ಇಬ್ಬರು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನೂ ದಿ. : 31.05.2021ರ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಶ್ಯಾಗಲೆ ಗ್ರಾಮದಲ್ಲಿ ನೆರವೇರಿಸಲಾಯಿತು.

### ಎಂ.ಕೆ.ಶಿವಕುಮಾರ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ಕುವೆಂಪು ನಗರ 13ನೇ ಮೇನ್ 6ನೇ ಕ್ರಾಸ್ ವಾಸಿ ದಿ. ಕೈದಾಳ್ ಮೋತಿ ಕರಿಬಸಪ್ಪ ಅವರ ದ್ವಿತೀಯ ಪುತ್ರ ಎಂ.ಕೆ. ಶಿವಕುಮಾರ್ (53) ಅವರು ದಿನಾಂಕ 31.05.2021ರ ಸೋಮವಾರ ಬೆಳಿಗ್ಗೆ 7: 15 ಗಂಟೆಗೆ ನಿಧನರಾದರು. ತಾಯಿ, ಇಬ್ಬರು ಸಹೋದರರು, ಸಹೋದರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು 31.05.2021ರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು

# ಹರಿಹರದಲ್ಲಿ ಇಂದು ಆಕ್ಸಿಜನ್ ಪ್ಲಾಂಟ್ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಹಣದಲ್ಲಿ ಆಕ್ಸಿಜನ್ ಪ್ಲಾಂಟ್ ನಿರ್ಮಾಣದ ಗುದ್ದಲಿ ಪೂಜೆಯನ್ನು ಇಂದು ಬೆಳಗ್ಗೆ 10 ಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕ ಎಸ್. ರಾಮಪ್ಪ ಅವರು ಮಾಡಲಿದ್ದಾರೆ.

ಇದೇ ಸಮಯದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ ಇವರು ತಮ್ಮ ಹುಟ್ಟು ಹಬ್ಬದ ಸವಿನೆನಪಿಗಾಗಿ ತಾಲ್ಲೂಕಿನ ಜನತೆಗೆ ಆಂಬ್ಯುಲೆನ್ಸ್ ವಾಹನಗಳಿಗೆ ಚಾಲನೆ ನೀಡಲಿದ್ದಾರೆ.

ಈ ಸಮಯದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಹನುಮಂತರಾಯಪ್ಪ, ಜಿಲ್ಲಾ ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ನಾಗರಾಜ್, ತಹಶೀಲ್ದಾರ್ ಕೆ. ಬಿ.ರಾಮಚಂದ್ರಪ್ಪ, ಪೌರಾಯುಕ್ತರಾದ ಎಸ್.ಲಕ್ಷ್ಮಿ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಹನುಮನಾಯ್ಕ್, ತಾಪಂ ಇ.ಓ. ಗಂಗಾಧರನ್ ಸೇರಿದಂತೆ ಇತರರು ಭಾಗವಿಸಲಿದ್ದಾರೆ.

# ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್‌ನಿಂದ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆ



**ಹರಪನಹಳ್ಳಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಜಿ.ಎಸ್. ಅನಿತ್**

ಹರಪನಹಳ್ಳಿ, ಮೇ 31- ದಿ. ಜಿ. ಮಲ್ಲಿಕಾರ್ಜುನಪ್ಪ, ದಿ. ಶ್ರೀಮತಿ ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಹರಪನಹಳ್ಳಿ ಪಟ್ಟಣದಲ್ಲಿ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆ ಮಾಡಲಾಗುವುದು ಎಂದು ಟ್ರಸ್ಟ್‌ನ ಮುಖ್ಯಸ್ಥ ಜಿ.ಎಸ್. ಅನಿತ್ ತಿಳಿಸಿದ್ದಾರೆ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಹಿಂಭಾಗದ ಆವರಣದಲ್ಲಿ ಟ್ರಸ್ಟ್ ಸ್ಥಳ ಪರಿಶೀಲನೆ ನಡೆಸಿದ ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ ಅವರ ತಂದೆಯವರಾದ ದಿ. ಜಿ.ಮಲ್ಲಿಕಾರ್ಜುನಪ್ಪ, ತಾಯಿ ದಿ. ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೂರು ಆಕ್ಸಿಜನ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಮುಂದಾಗಿದ್ದು ಚಿತ್ರದುರ್ಗ, ಹರಪನಹಳ್ಳಿ ಮತ್ತು ಹರಿಹರದಲ್ಲಿ 60 ಲಕ್ಷ ರೂ.ಗಳ ವೆಚ್ಚದಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟ್ ಸ್ಥಾಪನೆಯಾಗಲಿದೆ. ಆಕ್ಸಿಜನ್ ಉತ್ಪಾದನಾ ಘಟಕ ಜೂನ್ 20 ರೊಳಗೆ ಲೋಕಾರ್ಪಣೆಯಾಗಲಿದ್ದು, ಘಟಕವು ಪ್ರತಿ ನಿಮಿಷಕ್ಕೆ 330 ಲೀಟರ್ ಆಕ್ಸಿಜನ್ ಉತ್ಪಾದನೆ ಮಾಡಲಿದೆ. 60 ಲಕ್ಷ ವೆಚ್ಚದ ಈ ಘಟಕದಿಂದ 56 ಜನರಿಗೆ ಏಕ ಕಾಲಕ್ಕೆ ಆಕ್ಸಿಜನ್ ನೀಡಬಹುದು ಎಂದು ಹೇಳಿದರು.

ಪಶ್ಚಿಮ ಬಂಗಾಳದ ಆರ್ಚಿಡ್ ರಿನೀವಬಲ್ ಎನರ್ಜಿ ಕಂಪನಿಯಿಂದ ಈ ಘಟಕವನ್ನು ಸ್ಥಾಪನೆ ಮಾಡಲಾಗುವುದು. ಹರಪನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ನಮ್ಮ ಟ್ರಸ್ಟ್ ವತಿಯಿಂದ ಪೂರ್ಣಕಾಲಿಕ ಕೊಡುಗೆ ಇದಾಗಿದೆ. ವೈದ್ಯರು ಅವಶ್ಯವಿದ್ದಾಗಲೆಲ್ಲ ಉಪಯೋಗಿಸಬಹುದು ಎಂದರು.

ಸಂಸದರ ಇನ್ನೋರ್ವ ಪುತ್ರ ಜಿ.ಎಸ್. ರಾಜೀವ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಮುಖಂಡರಾದ ಆರುಂಡಿ ನಾಗರಾಜ್, ಜಿ. ನಂಜನಗೌಡ, ಎಂ.ಪಿ. ನಾಯ್ಕ, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ, ಜೆ. ಓಂಕಾರಗೌಡ, ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ್, ಆಸ್ಪತ್ರೆ ಮುಖ್ಯ ವೈದ್ಯ ಡಾ. ಶಿವಕುಮಾರ್, ಡಾ. ತಿಪ್ಪೇಸ್ವಾಮಿ, ವಿಶಾಲ್ ಮಂಡೇಲ, ನಿರ್ಮಲ ಮಂಡೇಲ, ಅಮಿತ್ ಶರ್ಮ ಇನ್ನಿತರರಿದ್ದರು.

## 5ಜಿ ವಿರುದ್ಧ ಹೈಕೋರ್ಟ್‌ನಲ್ಲಿ ಜೂಹಿ ಚಾವ್ಲಾ ಅರ್ಜಿ

ನವದೆಹಲಿ, ಮೇ 31 – ದೇಶದಲ್ಲಿ 5ಜಿ ಸೇವೆ ಆರಂಭಿಸದಂತೆ ನಟಿ ಜೂಹಿ ಚಾವ್ಲಾ ಅವರು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. 5ಜಿ ತರಂಗಗಳಿಂದ ಪಶು ಪಕ್ಷಿಗಳಿಗೆ ಹಾನಿಯಾಗುತ್ತದೆ ಎಂದವರು ಅರ್ಜಿಯಲ್ಲಿ ಹೇಳಿದ್ದಾರೆ. ನ್ಯಾಯಮೂರ್ತಿ ಸಿ. ಹರಿ ಶಂಕರ್ ಅವರ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು ಅವರು ಅರ್ಜಿಯನ್ನು ಇನ್ನೊಂದು ಪೀಠಕ್ಕೆ ವರ್ಗಾಯಿಸಿದ್ದು, ಜೂನ್ 2ರಂದು ವಿಚಾರಣೆ ನಡೆಸಲಿದೆ.

5ಜಿ ಸೇವೆ ಜಾರಿಗೆ ಬಂದರೆ ಎಲ್ಲ ಜೀವಗಳ ಮೇಲೆ ಪರಿಣಾಮವಾಗುತ್ತದೆ. ವಿಕಿರಣ ಪ್ರಮಾಣ ಅತಿ ಹೆಚ್ಚಾಗಿದೆ ಎಂದವರು ಹೇಳಿದ್ದಾರೆ.

# ಕೊರೊನಾ : ನರ್ಸ್‌ಗಳ ಜೊತೆ ಸಿಎಂ ಸಂವಾದ

**ಕರ್ತವ್ಯ ಪ್ರಜ್ಞೆ ಅನುಕರಣೀಯ ಎಂದು ಪ್ರಶಂಸೆ**

ಬೆಂಗಳೂರು, ಮೇ 31 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಕೊರೊನಾ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಜಿಲ್ಲೆಗಳ ಸ್ಟಾಫ್ ನರ್ಸ್‌ಗಳೊಂದಿಗೆ ವಿಡಿಯೋ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಕೊರೊನಾದ ಸಂಕಷ್ಟದ ಪರಿಸ್ಥಿತಿಯಲ್ಲಿ ಅಪಾಯವನ್ನು ಲೆಕ್ಕಿಸದೆ, ಸೋಂಕಿತರ ಶುಶ್ರೂಷೆಯಲ್ಲಿ ನಿರತರಾಗಿರುವ ಎಲ್ಲ ಸ್ಟಾಫ್ ನರ್ಸ್‌ಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ವೈಯಕ್ತಿಕ ಕಷ್ಟ-ನಷ್ಟಗಳನ್ನು ಬದಿಗೊತ್ತಿ, ಕುಟುಂಬದವರಿಂದ ಅಂತರ ಕಾಯ್ದುಕೊಂಡು ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಕರ್ತವ್ಯ ಪ್ರಜ್ಞೆ ಅನುಕರಣೀಯ ಎಂದು ಮುಖ್ಯಮಂತ್ರಿಗಳು ತಿಳಿಸಿದರು..

ಪ್ರಸ್ತುತ ರಾಜ್ಯದಲ್ಲಿ ಒಟ್ಟು 21,574 ಸ್ಟಾಫ್ ನರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ, ಸ್ಟಾಫ್ ನರ್ಸ್‌ಗಳ ಕಾರ್ಯವನ್ನು ಸದಾ ಉತ್ತೇಜಿಸುವ ನಿಟ್ಟಿನಲ್ಲಿ ಮಾಸಿಕ ವೇತನದ ಜೊತೆಗೆ , ಹೆಚ್ಚುವರಿಯಾಗಿ 8,000 ರೂ.ಗಳ ವಿಶೇಷ ಕೋವಿಡ್ ಭತ್ಯೆಯನ್ನೂ ಸಹ ನೀಡಲಾಗುತ್ತಿದೆ ಎಂದರು.

ಕೊರೊನಾದಿಂದ ಮೃತಪಟ್ಟ ಸ್ಟಾಫ್ ನರ್ಸ್‌ಗಳಿಗೆ 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ವಿಮಾ ಯೋಜನೆ'ಯ ಅಡಿಯಲ್ಲಿ 50 ಲಕ್ಷ ರೂ.ಗಳನ್ನು ನೀಡುವ ಸೌಲಭ್ಯವಿದ್ದು, ಈವರೆಗೆ ಇಂತಹ ಆರು ಪ್ರಕರಣಗಳಿಗೆ ಅರ್ಜಿಯನ್ನು ಸ್ವೀಕರಿಸಲಾಗಿದೆ. ಇದರಲ್ಲಿ, ಮೂರು ಪ್ರಕರಣಗಳಿಗೆ ವಿಮಾ ಮೊತ್ತವನ್ನು ನೀಡಲಾಗಿದ್ದು, ಉಳಿದ ಮೂರು ಪ್ರಕರಣಗಳಿಗೆ ಶೀಘ್ರದಲ್ಲಿಯೇ ವಿಮಾ ಮೊತ್ತವನ್ನು ಬಿಡುಗಡೆ ಮಾಡಲಾಗುವುದು. ಕೊರೊನಾ ನಿಯಂತ್ರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸ್ಟಾಫ್ ನರ್ಸ್‌ಗಳ ಸುರಕ್ಷತೆಗಾಗಿ ಅಗತ್ಯ ತರಬೇತಿ, ಸ್ವಯಂ ರಕ್ಷಣಾ ಸಾಧನಗಳಾದ ಪಿ ಪಿ ಇ ಕಿಟ್, ಗ್ಲೋಸ್‌ಗಳು, ಮಾಸ್ಕ್, ಫೇಸ್ ಶೀಲ್ಡ್, ಹ್ಯಾಂಡ್ ಸ್ಯಾನಿಟೈಸರ್‌ಗಳನ್ನು ಅಗತ್ಯ ಪ್ರಮಾಣದಲ್ಲಿ ಒದಗಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಯವರು, ಬೀದರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಸಂತೋಷ್, ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ವಹೀದಾ, ದಾವಣಗೆರೆ ಚಿಗಟೇರಿ ಆಸ್ಪತ್ರೆಯ ಎಂ.ಡಿ. ಶಾರದಾ, ಬಾದಾಮಿ ತಾಲ್ಲೂಕು ಆಸ್ಪತ್ರೆಯ ರೇಣುಕಾ ಗೂಗಿಹಾಳ, ಕೋಲಾರ ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆಯ ಶಶಿಕಲಾ, ರಾಯಚೂರು ವೈದ್ಯಕೀಯ ಕಾಲೇಜಿನ ರಾಚೋಟಿ ವಾರದ, ಚಾಮರಾಜನಗರ ಜಿಲ್ಲಾ ಆಸ್ಪತ್ರೆಯ ಪ್ರದೀಪ್‌ಕುಮಾರ್, ವಿಜಯಪುರ ಜಿಲ್ಲಾ ಆಸ್ಪತ್ರೆಯ ಪುಷ್ಪರಾಜ್, ಹರಿಹರ ಸಾರ್ವಜನಿಕ ಆಸ್ಪತ್ರೆಯ ಆರ್. ಶ್ವೇತಾ , ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಸಂಧ್ಯಾರಾಣಿ ಅವರೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಸ್ಟಾಫ್ ನರ್ಸ್‌ಗಳ ಕರ್ತವ್ಯ ನಿರ್ವಹಣೆ, ಆರೋಗ್ಯದ ಸ್ಥಿತಿಗತಿ ಮತ್ತಿತರ ವಿಷಯಗಳ ಕುರಿತು ಮುಖ್ಯಮಂತ್ರಿಗಳು ಚರ್ಚಿಸಿದರು. ದಾವಣಗೆರೆಯ ಚಿಗಟೇರಿ ಆಸ್ಪತ್ರೆಯ ಶಾರದಾ ಅವರು ಕೋವಿಡ್ ಸೋಂಕಿತರ ಹೆರಿಗೆ ಮಾಡಿಸಿದ ಅನುಭವವನ್ನು ಹಂಚಿಕೊಂಡರು. ಒಂದು ತಿಂಗಳಿಗೆ ಸುಮಾರು 8 ಸೋಂಕಿತರಿಗೆ ಶಸ್ತ್ರ ಚಿಕಿತ್ಸೆ ಹಾಗೂ 10-12 ಸೋಂಕಿತರಿಗೆ ಸಹಜ ಹೆರಿಗೆಗಳಾಗುತ್ತಿದ್ದು, ತಮ್ಮ ಆಸ್ಪತ್ರೆಯಲ್ಲಿ ಇಂತಹ ತಾಯಿ-ಮಗುವಿನ ಮರಣ ಪ್ರಮಾಣ ಕಡಿಮೆ ಇದೆ ಎಂದು ತಿಳಿಸಿದರು.

# ಮೋದೀಜಿ ಏಳು ವರ್ಷದ ಸಮರ್ಥಾಡಳಿತ ಶ್ಲಾಘನೀಯ



**ಜಗಳೂರು ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ**

ಜಗಳೂರು, ಮೇ 31- ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಎಂಟನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವುದು ಸಂತಸದ ಸಂಗತಿ ಎಂದು ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿಯೇ ಆಮ್ಲಜನಕ ಉತ್ಪಾದನೆ ಮಾಡುವ ಘಟಕವನ್ನು ಸುಮಾರು 80 ಲಕ್ಷ ರೂಪಾಯಿಗಳಲ್ಲಿ ಕ್ಲೀನ್ ಮ್ಯಾಕ್ ಕಂಪನಿಯು ಸಾರ್ವಜನಿಕ ಆಸ್ಪತ್ರೆಯ ಪಕ್ಕದಲ್ಲಿ ಮಾಡುತ್ತಿದೆ. ಆಮ್ಲಜನಕ ಉತ್ಪನ್ನ ಘಟಕವನ್ನು ಸ್ಥಾಪನೆ ಮಾಡಿದರೆ, ಆಮ್ಲಜನಕದ ಕೊರತೆ ನೀಗಿಸಿ, ರೋಗಿಗಳಿಗೆ ಸಕಾಲದಲ್ಲಿ ಆಮ್ಲಜನಕ ದೊರೆತು ಅನುಕೂಲವಾಗಲಿದೆ ಎಂದರು.

ಶಾಸಕರು ಎಲ್ಲಾ ಅಧಿಕಾರಿಗಳೊಂದಿಗೆ ಮೆದಗಿನಕೆರೆ ಕೋವಿಡ್ ಸೆಂಟರ್ ಮತ್ತು ಸಾರ್ವಜನಿಕ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು ಅವರ ಆರೋಗ್ಯ ಕ್ಷೇಮವನ್ನು ವಿಚಾರಣೆ ಮಾಡಿ ನೆರವು ನೀಡುತ್ತಿದ್ದಾರೆ. ಜಿಲ್ಲೆಯ ಸಂಸದ ಸಿದ್ದೇಶಣ್ಣನವರು ಜಿಲ್ಲಾದ್ಯಂತ ಪ್ರತಿಯೊಂದು ಕೋವಿಡ್ ಸೆಂಟರ್‌ಗಳಿಗೆ ಭೇಟಿ ನೀಡಿ, ಅನಾರೋಗ್ಯದ ಮಧ್ಯೆಯೂ ಕಾಳಜಿ ವಹಿಸಿದ ಫಲವಾಗಿ ಅಧಿಕಾರಿಗಳು ಉತ್ತಮ ಸೇವೆಗೈಯ್ಯುತ್ತಿದ್ದು ಕೊರೊನಾ ಹತೋಟಿಗೆ ಬಂದಿದೆ ಎಂದು ತಿಳಿಸಿದರು.

ಕ್ಲೀನ್ ಮ್ಯಾಕ್ಸ್ ವಿಂಡ್ ಮ್ಯಾನೇಜರ್ ಸುಭಾಷ್ ಮಾತನಾಡಿ, ಆಮ್ಲಜನಕ ಘಟಕದಿಂದ ಒಂದು ನಿಮಿಷಕ್ಕೆ 330 ಲೀಟರ್ ಉತ್ಪಾದನೆಯಾಗಲಿದ್ದು, ಸುಮಾರು 70 ಬೆಡ್‌ಗಳಿಗೆ ಆಮ್ಲಜನಕ ನೀಡಬಹುದಾಗಿದೆ. ಜೂನ್ 4 ರಂದು ಪರೀಕ್ಷಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ.ಪಂ. ಸದಸ್ಯರಾದ ಪಾಪಲಿಂಗಪ್ಪ, ನವೀನ್ ಕುಮಾರ್, ಮುಖಂಡರಾದ ಶಿವಣ್ಣ, ರಮೇಶ್ ಇನ್ನಿತರರಿದ್ದರು.

## ಕೊಟ್ಟೂರಿನಲ್ಲಿ ಆಹಾರ ಧಾನ್ಯಗಳ ಕಿಟ್ ವಿತರಣೆ



**ಅಜೀಮ್ ಪ್ರೇಮ್ ಜೀ ಫೌಂಡೇಷನ್ (ಬಳ್ಳಾರಿ) ಸೇವೆ**

ಕೊಟ್ಟೂರು, ಮೇ 31 - ಅಜೀಮ್ ಪ್ರೇಮ್ ಜೀ ಫೌಂಡೇಷನ್ ಬಳ್ಳಾರಿ ಇವರು ಕೊರೊನಾ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ಕಡು ಬಡವರಿಗೆ, ಅತಿ ಹೆಚ್ಚು ಸಂಕಷ್ಟದಲ್ಲಿರುವ ಜನರಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ನೀಡುತ್ತಿರುವುದು ತುಂಬಾ ಶ್ಲಾಘನೀಯ ಎಂದು ತಹಶೀಲ್ದಾರ್ ಜಿ.ಅನಿಲ್‌ಕುಮಾರ್ ತಿಳಿಸಿದರು.

ಅವರು ಇಂದು ಕೊಟ್ಟೂರು ತಾಲ್ಲೂಕಿನ ಜೋಳದ ಕೂಡ್ಲಿಗಿ, ಮಂಗನಹಳ್ಳಿ, ನಾಗರಕಟ್ಟೆ, ತೂಲಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಇವರ ಪರವಾಗಿ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು

ಇದೇ ರೀತಿ ದಾನಿಗಳು ಸಂಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡಲು ಮುಂದೆ ಬಂದರೆ ಅವರಿಗೆ ಒಳ್ಳೆಯದಾಗುತ್ತದೆ. ಅದಕ್ಕೆ ತಾಲ್ಲೂಕು ಆಡಳಿತ ಸಹಕಾರವನ್ನು ನೀಡುತ್ತದೆ ಎಂದು ತಿಳಿಸಿದರು.

# ರಿಯಾಯ್ತಿ ದರದಲ್ಲಿ ಬಿತ್ತನೆ ಬೀಜ ವಿತರಣೆ

**ಬಿತ್ತನೆ ಬೀಜ ಮಾರಾಟಕ್ಕೆ ರಾಣೇಬೆನ್ನೂರಿನ ಶಾಸಕ ಅರುಣ್‌ಕುಮಾರ್ ಪೂಜಾರ್ ಚಾಲನೆ**



ರಾಣೇಬೆನ್ನೂರು, ಮೇ 31- ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ ಎನ್ನುವಂತೆ, ಕೋವಿಡ್‌ನ ಸಂಕಷ್ಟದಲ್ಲೂ ಕೃಷಿ ಚಟುವಟಿಕೆಗಳಿಗೆ ತೊಂದರೆ ಆಗಬಾರದು ಎನ್ನುವ ಸದುದ್ದೇಶದಿಂದ ಸರ್ಕಾರ ಲಾಕ್‌ಡೌನ್‌ನಲ್ಲಿ ರೈತರಿಗೆ ರಿಯಾಯ್ತಿ ನೀಡಿದೆ ಎಂದು ಶಾಸಕ ಅರುಣ್ ಕುಮಾರ ಪೂಜಾರ ಹೇಳಿದರು.

ಅವರು, ಕೃಷಿ ಕಛೇರಿಯಲ್ಲಿ ಸಹಾಯಧನದೊಂದಿಗೆ ಬಿತ್ತನೆ ಬೀಜ ಮಾರಾಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಶೇಂಗಾ, ತೊಗರಿ, ಹೆಸರು, ಜೋಳ, ನವಣೆ, ಭತ್ತ ಮತ್ತು ಸೋಯಾಬಿನ್ ಮುಂತಾದ ಮುಂಗಾರು ಹಂಗಾಮಿನ ಬೀಜಗಳಿಗೆ ಸಾಮಾನ್ಯ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ರೈತರಿಗೆ ಒಂದು ಕೆ.ಜಿ. ದರದಲ್ಲಿ ಸಹಾಯ ಧನ ನಿಗದಿಗೊಳಿಸಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ತಾಲ್ಲೂಕಿನಾದ್ಯಂತ ರಾಣೇಬೆನ್ನೂರು, ಮೆಡ್ಲೇರಿ, ಕುಪ್ಪೇಲೂರು 3 ರೈತ ಸಂಪರ್ಕ ಕೇಂದ್ರ, ಹಲಗೇರಿ, ಮಾಕನೂರು, ಚಳಗೇರಿ, ಹರನಗಿರಿ ಹಾಗೂ ಸುಣಕಲ್ಲಬಿದರಿ 5 ಗ್ರಾಮಗಳಲ್ಲಿ ವಿತರಣೆ ಕೇಂದ್ರಗಳನ್ನು ತೆರೆಯಲಾಗಿದೆ.

ತಾಲ್ಲೂಕಿನಲ್ಲಿ ಯಾವುದೇ ಗೊಬ್ಬರ, ಬಿತ್ತನೆ ಬೀಜ ಅವಶ್ಯಕತೆಯಷ್ಟು ದಾಸ್ತಾನು ಇದ್ದು, ಕೊರತೆಯಾಗಲಾರದು. ಸಹಾಯಕ ಕೃಷಿ ನಿರ್ದೇಶಕ ಎಚ್.ಬಿ. ಗೌಡಪ್ಪಳವರ ಹೇಳಿದರು.

ಕಾರ್ಯಕ್ರಮದಲ್ಲಿ ಕೃಷಿಕ ಸಮಾಜದ ಸದಸ್ಯ ಆರ್.ಎನ್. ಗಂಗೋಳ, ಎಪಿಎಂಸಿ ಸದಸ್ಯ ಬಸವರಾಜ ಹುಲ್ಲತ್ತಿ, ಉಪಕೃಷಿ ನಿರ್ದೇಶಕರಾದ ಜಿ.ಎಸ್. ಸ್ಫೂರ್ತಿ, ಸಿದ್ದಪ್ಪ ಕೆಂಚಪ್ಪನವರ ಇನ್ನಿತರರಿದ್ದರು.


## ಟ್ವಿಟ್ಟರ್ ಡಿಜಿಟಲ್ ನಿಯಮ ಪಾಲಿಸಬೇಕು : ಹೈಕೋರ್ಟ್

ನವದೆಹಲಿ, ಮೇ 31 – ಕೇಂದ್ರ ಸರ್ಕಾರ ರೂಪಿಸಿರುವ ನೂತನ ಡಿಜಿಟಲ್ ಮಾಧ್ಯಮ ನಿಯಮಗಳಿಗೆ ತಡೆಯಾಜ್ಞೆ ಹೊರಡಿಸಿಲ್ಲ ಎಂದಾದರೆ, ಅವುಗಳನ್ನು ಟ್ವಿಟ್ಟರ್ ಪಾಲಿಸಬೇಕು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಟ್ವಿಟ್ಟರ್ ನೂತನ ನಿಯಮಗಳನ್ನು ಪಾಲಿಸಿಲ್ಲ ಎಂದು ವಕೀಲ ಅಮಿತ್ ಆಚಾರ್ಯ ಎಂಬುವವರು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರೇಖಾ ಪಲ್ಲಿ, ಕೇಂದ್ರ ಸರ್ಕಾರ ಹಾಗೂ ಟ್ವಿಟ್ಟರ್‌ಗೆ ನೋಟಿಸ್ ಕಳಿಸುವಾಗ ಈ ಟಿಪ್ಪಣಿ ಮಾಡಿದ್ದಾರೆ.

ನಿಯಮಗಳನ್ನು ಪಾಲಿಸಿದ್ದೇವೆ ಹಾಗೂ ದೂರುಗಳ ನಿರ್ವಹಣೆ ಅಧಿಕಾರಿಯನ್ನು ನೇಮಿಸಿದ್ದೇವೆ ಎಂದು ಟ್ವಿಟ್ಟರ್ ಹೇಳಿದೆ. ಆದರೆ, ಕೇಂದ್ರ ಸರ್ಕಾರ ಈ ಹೇಳಿಕೆಯನ್ನು ತಳ್ಳಿ ಹಾಕಿದೆ. ಕೆಲ ಟ್ವೀಟ್‌ಗಳಿಗೆ ಸಂಬಂಧಿಸಿದಂತೆ ದೂರು ದಾಖಲಿಸಲು ಹೋದಾಗ, ಟ್ವಿಟ್ಟರ್ ನಿಯಮಗಳನ್ನು ಪಾಲಿಸಿಲ್ಲ ಎಂಬುದು ತಿಳಿದು ಬಂದಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

ಫೆಬ್ರವರಿ 25ರಿಂದ ನೂತನ ನಿಯಮಗಳು ಜಾರಿಗೆ ಬಂದಿವೆ. ಇವುಗಳನ್ನು ಜಾರಿಗೆ ತರಲು ಸಾಮಾಜಿಕ ಜಾಲತಾಣಗಳಿಗೆ ಮೂರು ತಿಂಗಳ ಅವಧಿ ನೀಡಲಾಗಿತ್ತು. ಈ ಅವಧಿ ಮೇ 25ಕ್ಕೆ ಮುಗಿದಿದೆ. ಆದರೂ, ಯಾವುದೇ ದೂರು ನಿರ್ವಹಣಾ ಅಧಿಕಾರಿಯನ್ನು ಟ್ವಿಟ್ಟರ್ ನೇಮಿಸಿಲ್ಲ ಎಂದು ಸರ್ಕಾರದ ಪರವಾಗಿ ಹಾಜರಿದ್ದ ವಕೀಲ ರಿಪುದಮನ್ ಸಿಂಗ್ ಭಾರದ್ವಜ್ ಹೇಳಿದ್ದಾರೆ.


# ದಾವಣಗೆರೆಯ ಪ್ರಥಮ ರೆಸಾರ್ಟ್ 'ಜೆನಿಸಿಸ್ ರೆಸಾರ್ಟ್' ಯಶಸ್ವಿ 16ನೇ ವರ್ಷದಲ್ಲಿ

**ಕ್ಯಾನ್ವಾಸಿಂಗ್ ಏಜೆಂಟ್ ಆಗಿ ಯಶ ಸಾಧಿಸಿದ ಮಂಜುಗೌಡ್ರು ಮಾಲೀಕತ್ವದ ರೆಸಾರ್ಟ್**

ಅದು 2005ನೇ ವರ್ಷ. ದಾವಣಗೆರೆ ಸಮೀಪ ಬೈಪಾಸ್ ರಸ್ತೆಯಲ್ಲಿ ಸುಮಾರು ನಾಲ್ಕು ಎಕರೆ ಜಾಗದಲ್ಲಿ 'ಜೆನಿಸಿಸ್ ರೆಸಾರ್ಟ್' ಆರಂಭವಾದಾಗ ದಾವಣಗೆರೆ ಜನತೆಗೆ ಹೆಮ್ಮೆಯ ವಿಚಾರವದು.

ಬಟ್ಟೆಯ ಮಿಲ್ಲುಗಳೆಲ್ಲಾ ಸ್ತಬ್ಧವಾಗಿ ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಖ್ಯಾತಿ ಮರೆಯಾಗುತ್ತಾ, ಶೈಕ್ಷಣಿಕ ನಗರಿ ಎಂಬ ಹೆಸರು ಪಡೆಯುವತ್ತ ನಗರ ನಿಧಾನವಾಗಿ ಹೆಜ್ಜೆ ಇಡುತ್ತಿದ್ದ ವೇಳೆ.


ಶಿಕ್ಷಣ ಹಾಗೂ ವ್ಯವಹಾರಕ್ಕಾಗಿ ಅಕ್ಕಪಕ್ಕದ ಜಿಲ್ಲೆ ಹಾಗೂ ರಾಜ್ಯದ ಜನತೆ ದಾವಣಗೆರೆಗೆ ಬಂದಾಗ ತಂಗಲು ದಾವಣಗೆರೆಯಲ್ಲೊಂದು ಉತ್ತಮ ರೆಸಾರ್ಟ್ ಅಗತ್ಯವಿತ್ತು. ಆದರೆ ಪ್ರವಾಸೋದ್ಯಮಕ್ಕೆ ಸೂಕ್ತವಲ್ಲದ ನಗರದಲ್ಲಿ ರೆಸಾರ್ಟ್ ಮಾಡುವುದು ಲಾಭದಾಯಕವಲ್ಲ ಎಂಬ ವಿಚಾರವಿದ್ದರೂ, ತಾನು ವ್ಯಾಪಾರ ಮಾಡಿ ದುಡಿದ ಹಣವನ್ನು ತನ್ನ ಜಿಲ್ಲೆಯಲ್ಲಿಯೇ ಉದ್ಯಮಕ್ಕೆ ಉಪಯೋಗಿಸಬೇಕೆಂಬ ನಿರ್ಧಾರ ಮಾಡಿ 'ಜೆನಿಸಿಸ್ ರೆಸಾರ್ಟ್' ಆರಂಭಿಸಿದ್ದು ಜಿ.ಎಸ್. ಮಂಜುಗೌಡ್ರು.

ಹೌದು, ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಮುಚ್ಚನೂರು ಗ್ರಾಮದ ಮಂಜುಗೌಡ್ರು ವಿದ್ಯಾಭ್ಯಾಸ ನಡೆಸಿದ್ದು ಮೋತಿ ವೀರಪ್ಪ ಕಾಲೇಜು ಹಾಗೂ ಡಿ.ಆರ್.ಎಂ. ವಿಜ್ಞಾನ ಕಾಲೇಜಿನಲ್ಲಿ. ತನ್ನ ಸ್ನೇಹಿತರೆಲ್ಲಾ ಎಂಜಿನಿಯರ್ ಹಾಗೂ ವೈದ್ಯರಾಗಿದ್ದರೆ ಇವರು ಮಾತ್ರ ಬ್ಯುಸಿನೆಸ್ ಫೀಲ್ಡ್‌ಗೆ ಇಳಿದಿದ್ದರು.

ದಾವಣಗೆರೆಯಲ್ಲಿ ರೈಸ್ ಮಿಲ್‌ಗಳಿಗೆ ಅಕ್ಕಿ ಖರೀದಿಗೆ ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ವ್ಯಾಪಾರಿಗಳು ಬಂದಾಗ ಇಲ್ಲಿನ ರೈಸ್ ಮಿಲ್ ಮಾಲೀಕರು ಅಕ್ಕಿ ಕೊಡಲು ಹಿಂದೇಟು ಹಾಕುತ್ತಿದ್ದರು. ಆಗ ವ್ಯಾಪಾರಿಗಳಿಗೆ ಅಕ್ಕಿ ಕೊಡಿಸುವ ಕಾಯಕಕ್ಕೆ ಮುಂದಾಗಿದ್ದರ ಫಲವಾಗಿ ಮಂಜುಗೌಡ ಅವರು ದಾವಣಗೆರೆಯಲ್ಲಿಯೇ ಪ್ರಥಮವಾಗಿ ಕ್ಯಾನ್ವಾಸಿಂಗ್ ಏಜೆಂಟ್ ಆದರು.

**ಅಂದ ಹಾಗೆ ಜೂನ್ 1ಕ್ಕೆ ಉದ್ಯಮಿ ಮಂಜುಗೌಡ್ರು ಅವರು 60 ವರ್ಷ ಪೂರೈಸಿ 61ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಪಬ್ಲಿಸಿಟಿ ಬಯಸದೆ ಅನೇಕ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿರುವ ಗೌಡ್ರು, ಇದೀಗ ತರಳಬಾಳು ಜಗದ್ಗುರುಗಳ ಆಶಯದಂತೆ ಕೊರೊನಾ ರೋಗಿಗಳಿಗೆ ಉಚಿತ ಅನ್ನ ದಾಸೋಹ ನಡೆಸುತ್ತಿದ್ದು, ತನ್ನ ಜನ್ಮ ದಿನದ ಅಂಗವಾಗಿ ತಾವೂ ಸಹ ಒಂದು ದಿನ ದಾಸೋಹದ ಖರ್ಚು ಭರಿಸಲು ನಿರ್ಧರಿಸಿದ್ದಾರೆ.**

**ಪ್ರತಿ ಪುರುಷನ ಹಿಂದೆ ಓರ್ವ ಮಹಿಳೆ ಇರುತ್ತಾಳೆ ಎಂಬಂತೆ ಮಂಜುಗೌಡ್ರ ಅವರು ಯಶಸ್ಸಿಗೆ ಬೆನ್ನೆಲುಬಾಗಿರುವುದು ಪತ್ನಿ ವಸಂತ ಪದ್ಮ. ಮಗ ಧನ್ಯಕುಮಾರ ಸಹ ಉಡುಪಿಯಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಅಭ್ಯಾಸ ಮಾಡಿ, ಇದೀಗ ತಂದೆಯ ವ್ಯವಹಾರಗಳನ್ನು ತಾನೇ ನೋಡಿಕೊಳ್ಳಲಾರಂಭಿಸಿದ್ದಾರೆ.**




ಮಂಜುಗೌಡ್ರು

ಇಂದಿಗೂ ಮಂಜುಗೌಡ್ರು ಎಂದರೆ ಅಕ್ಕ ಪಕ್ಕದ ಜಿಲ್ಲೆಗಳಲ್ಲಷ್ಟೇ ಅಲ್ಲ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರದ ರಾಜ್ಯಗಳ ಹಲವಾರು ವ್ಯಾಪಾರಿಗಳಿಗೂ ಅಚ್ಚುಮೆಚ್ಚು.

ಕ್ಯಾನ್ವಾಸಿಂಗ್ ಏಜೆಂಟ್ ಆಗಿ ಹೆಸರು ಗಳಿಸಿದ್ದ ಗೌಡ್ರು ಕೈಯಲ್ಲಿ ಪಳಗಿದ 15ಕ್ಕೂ ಹೆಚ್ಚು ಯುವಕರು ಇಂದು ಇದೇ ಉದ್ಯಮದಲ್ಲಿ ಯಶಸ್ಸು ಗಳಿಸಿ ಉತ್ತಮ ಭವಿಷ್ಯ ಕಂಡುಕೊಂಡಿದ್ದಾರೆ. ಅಂದ ಹಾಗೆ ಯುವಕರು ಉದ್ಯೋಗ ಮಾಡಲು ಸಾಕಷ್ಟು ಅವಕಾಶಗಳಿವೆ. ಆದರೆ ತಾಳ್ಮೆಬೇಕು. ಈಗಿನ ಯುವಕರು ದಿಢೀರ್ ಶ್ರೀಮಂತರಾಗಲು ಹಂಬಲಿಸುತ್ತಾರೆ. ಆದ ಕಾರಣಕ್ಕಾಗಿಯೇ ಯಶಸ್ಸು ಕಾಣಲು ವಿಫಲರಾಗುತ್ತಾರೆ ಎನ್ನುವ ಮಂಜುಗೌಡ್ರು, ಈಗಲೂ ಯುವಕರು ವಿವಿಧ ಬಗೆಯ ಬ್ಯುಸಿನೆಸ್‌ಗಳ ಬಗ್ಗೆ ಸಲಹೆ ಕೇಳಿದರೆ ನೀಡಲು ಸಿದ್ಧವಿರುವುದಾಗಿ ಹೇಳುತ್ತಾರೆ.

ಈ ಅಕ್ಕಿ ವ್ಯಾಪಾರದಿಂದ ಬಂದ ಲಾಭದ ಹಣವೇ 'ಜೆನಿಸಿಸ್ ರೆಸಾರ್ಟ್' ಶುಚಿ ಹಾಗೂ ರುಚಿಗೆ ಹೆಸರುವಾಸಿಯಾದ ರೆಸಾರ್ಟ್‌ನಲ್ಲಿ ಸೌತ್ ಇಂಡಿಯನ್, ನಾರ್ಥ್ ಇಂಡಿಯನ್ ಆಹಾರ ಸವಿದವರು, ರಾತ್ರಿ ತಂಗಿದವರು ಇಲ್ಲಿನ ವಾತಾವರಣಕ್ಕೆ ಮನಸೋತ ಗ್ರಾಹಕರು, ರೆಸಾರ್ಟ್ ಎಂದರೆ 'ಜೆನಿಸಿಸ್ ರೆಸಾರ್ಟ್' ಎಂದು ಹೊಗಳುವಷ್ಟರ ಮಟ್ಟಿಗೆ ರೆಸಾರ್ಟ್ ಖ್ಯಾತಿ ಗಳಿಸಿದೆ.

ರೆಸಾರ್ಟ್‌ನಲ್ಲಿ ಸುಮಾರು 100 ಹಾಗೂ 250 ಜನರು ಸೇರುವಷ್ಟು ಪ್ರತ್ಯೇಕವಾದ ಪಾರ್ಟಿ ಹಾಲ್ ವ್ಯವಸ್ಥೆ ಇದೆ. ಇಲ್ಲಿ ನಾಮಕರಣ, ಬರ್ತ್‌ಡೇ ಪಾರ್ಟಿ ಮುಂತಾದ ಕಾರ್ಯಕ್ರಮಗಳನ್ನು ಮಾಡಬಹುದು. ಇನ್ನು ಹೊರ ಆವರಣದಲ್ಲಿ 500ಕ್ಕೂ ಹೆಚ್ಚು ಜನರಿಗೆ ಅವಕಾಶವಿರುವ ಲ್ಯಾನ್ ಹಾಲ್ ಲಭ್ಯವಿದೆ. ಪ್ರೀ ವೆಡ್ಡಿಂಗ್ ಶೂಟ್ ಗಳಿಗೂ ಈ ಜಾಗ ಉತ್ತಮವಾಗಿದೆ. ಮದುವೆಗಳೂ ನಡೆಯುತ್ತವೆ.



ಇತ್ತೀಚೆಗೆ ಅನೇಕ ಹೋಟೆಲ್‌ಗಳು, ಕೆಲ ರೆಸಾರ್ಟ್‌ಗಳು ದಾವಣಗೆರೆ ನಗರ ಹಾಗೂ ಸುತ್ತ ಮುತ್ತ ತಲೆ ಎತ್ತಿವೆ. ಆದರೆ ಸುಮಾರು 4 ಎಕರೆ ಸ್ವಂತ ಜಾಗದಲ್ಲಿ ನಿರ್ಮಾಣವಾಗಿರುವ ನಮ್ಮ ರೆಸಾರ್ಟ್‌ನಲ್ಲಿನ ಆತ್ಮೀಯ ವಾತಾವರಣ ಬೇರೆಲ್ಲೂ ಸಿಗದು ಎನ್ನುತ್ತಾರೆ ಮಂಜುಗೌಡ್ರು.

ನಿಮ್ಮ ವ್ಯಾಪಾರ ಆರಂಭವಾಗಿದ್ದು ಹೇಗೆ? ಎಂಬ ಪ್ರಶ್ನೆಗೆ ಮಂಜುಗೌಡ್ರು ಉತ್ತರಿಸಿದ್ದು ಹೀಗೆ..

'ನಾನು ಚಿಕ್ಕವನಾಗಿದ್ದಾಗಲೇ ತುಂಬಾ ಉಡಾಳನಾಗಿದ್ದೆ. ಹಣ ಕೇಳಿದರೆ ಕೊಡಲು ತಂದೆ ನಿರಾಕರಿಸಿದಾಗ ತಾಯಿ ಕೊಡುತ್ತಿದ್ದರು. ಇದನ್ನು ಕಂಡ ತಂದೆ, ಹಣ ಸಂಪಾದನೆ ಎಷ್ಟು ಕಷ್ಟ ಎಂದು ಗೊತ್ತಾ ನಿನಗೆ? 100 ರೂ. ಸಂಪಾದಿಸು ತಿಳಿಯುತ್ತದೆ ಎಂದು ಗದರಿಸುತ್ತಿದ್ದರು.

ಕೂಲಿ ಮಾಡಲು ಹೋದರೆ 10 ರೂ. ಮಾತ್ರ ಸಿಗುತ್ತಿತ್ತು. ಆಗ ವ್ಯಾಪಾರಿಗಳಿಗೆ ರೈಸ್ ಮಿಲ್ ಮಾಲೀಕರಿಂದ ಅಕ್ಕಿ ಕೊಡಿಸಲು ಆರಂಭಿಸಿದೆ. 1 ಲೋಡ್ ಅಕ್ಕಿ ಕೊಡಿಸಿದರೆ ರೈಸ್ ಮಿಲ್ ಮಾಲೀಕರಿಂದ 100 ರೂ. ಹಾಗೂ ವ್ಯಾಪಾರಿ ಗಳಿಂದ 100 ರೂ. ಸಿಗುತ್ತಿತ್ತು. ಒಂದೇ ದಿನ 200 ರೂ. ಸಂಪಾದನೆಯಾಗಿತ್ತು. ಇದೇ ವ್ಯಾಪಾರ ದಿನೇ ದಿನೇ ಬೆಳೆಯುತ್ತಾ ಸಾಗಿತ್ತು....' ಹೀಗೆ ನೆನಪಿನ ಬುತ್ತಿ ಬಿಚ್ಚಿಟ್ಟರು ಗೌಡ್ರು.



Advt.

# ಅರಬಗಟ್ಟೆ ಕೋವಿಡ್ ಕೇರ್ ಸೆಂಟರ್ ಉದ್ಘಾಟನೆ

## ಹೊನ್ನಾಳಿ ಶಾಸಕ ರೇಣುಕಾಚಾರ್ಯರ ಕಾರ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಶ್ಲಾಘನೆ

ಹೊನ್ನಾಳಿ, ಮೇ 31- ತಾಲ್ಲೂಕಿನ ಅರಬಗಟ್ಟೆಯಲ್ಲಿರುವ ವಸತಿ ಶಾಲೆಯಲ್ಲಿ ನಿರ್ಮಾಣ ಮಾಡಿರುವ ಕೋವಿಡ್ ಕೇರ್ ಸೆಂಟರನ್ನು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸೋಮವಾರ ಲೋಕಾರ್ಪಣೆ ಮಾಡಿದರು. ನಂತರ ಮಾತನಾಡಿದ ಸಚಿವರು. ಅರಬ ಗಟ್ಟೆಯಲ್ಲಿ ಅತ್ಯಂತ ಸುಸಜ್ಜಿತ ಕೋವಿಡ್ ಕೇರ್ ಸೆಂಟರನ್ನು ರೇಣುಕಾಚಾರ್ಯ ಕೇವಲ 48 ಘಂಟೆಯಲ್ಲಿ ನಿರ್ಮಾಣ ಮಾಡಿದ್ದು, ನಿಜಕ್ಕೂ ಇದು ಮಾದರಿ ಕೋವಿಡ್ ಕೇರ್ ಆಗಿರುವುದಕ್ಕೆ ರೇಣುಕಾಚಾರ್ಯ ಅವರ ಇಚ್ಛಾಶಕ್ತಿ ಕಾರಣ ಎಂದರು.



ಸೋಂಕಿತರ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದು, ಆ ನಿಟ್ಟಿನಲ್ಲಿ ಅವಳಿ ತಾಲ್ಲೂಕಿನ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದರು.

ಶಾಸಕ ರೇಣುಕಾಚಾರ್ಯ ಮಾತನಾಡಿ, ಒಂದು ಕೋಟಿ ವೆಚ್ಚದಲ್ಲಿ ಆಸ್ಪತ್ರೆಯ ಆವರಣದಲ್ಲಿ ಆಕ್ಸಿಜನ್ ಉತ್ಪಾದನಾ ಘಟಕ ನಿರ್ಮಾಣವಾಗುತ್ತಿದ್ದು, ಸದ್ಯ ಆಸ್ಪತ್ರೆಯಲ್ಲಿ 70 ಆಮ್ಲಜನಕ ಸಾಂದ್ರಕಗಳು ಲಭ್ಯವಿದ್ದು, ಬೆಂಗಳೂರಿನ ನಮ್ಮ ಸ್ನೇಹಿತರು 10 ಆಮ್ಲಜನಕ ಸಾಂದ್ರಕಗಳನ್ನು ನೀಡುತ್ತಿದ್ದು, ಒಟ್ಟು 80 ಆಮ್ಲಜನಕ ಸಾಂದ್ರಕಗಳು ಲಭ್ಯವಿದ್ದು ಯಾವುದೇ ಕಾರಣಕ್ಕೂ ಆಕ್ಸಿಜನ್ ಕೊರತೆಯಾಗುವುದಿಲ್ಲ. 800 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್ ನಿರ್ಮಿಸಿದ್ದು, ಅಗತ್ಯ ಬಿದ್ದರೆ ಒಂದು ಸಾವಿರ ಬೆಡ್‌ಗಳ ಕೋವಿಡ್ ಕೇರ್ ಸೆಂಟರ್ ನಿರ್ಮಾಣ ಮಾಡುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಸಿಇಓ ಡಾ. ವಿಜಯಮಹಂತೇಶ್ ದಾನಮ್ಮನವರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಉಪ ವಿಭಾಗಾಧಿಕಾರಿ ಮಮತ ಹೊಸಗೌಡರ್, ತಹಶೀಲ್ದಾರ್‌ಗಳಾದ ಬಸನಗೌಡ್ ಕೋಟೂರ, ತನುಜಾ ಟಿ ಸವದತ್ತಿ, ಸಿಪಿಐ ದೇವರಾಜ್, ಇಓ ಗಳಾದ ಗಂಗಾಧರ್ ಮೂರ್ತಿ, ರಾಮ ಭೋವಿ, ತಾಲ್ಲೂಕು ಆರೋಗ್ಯಾಧಿಕಾರಿ ಕೆಂಚಪ್ಪ ಇನ್ನಿತರರಿದ್ದರು.

### ಕೊರೊನಾ ಸೋಂಕು 50 ದಿನಗಳಲ್ಲೇ ಕಡಿಮೆ

ನವದೆಹಲಿ, ಮೇ 31 – ಪ್ರತಿದಿನ ಕಂಡು ಬರುವ ಕೊರೊನಾ ಪ್ರಕರಣಗಳಲ್ಲಿ ಮತ್ತಷ್ಟು ಇಳಿಕೆಯಾಗಿದ್ದು, ಕಳೆದ 50 ದಿನಗಳಲ್ಲೇ ಅತಿ ಕಡಿಮೆ 1.52 ಲಕ್ಷ ಪ್ರಕರಣಗಳು ಕಂಡು ಬಂದಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ದಿನ 3,128 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ. 2.38 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಕಳೆದ 18 ದಿನಗಳಿಂದ ಸೋಂಕಿತರಿಗಿಂತ ಚೇತರಿಸಿಕೊಂಡವರ ಸಂಖ್ಯೆ ಹೆಚ್ಚಾಗಿದೆ.

ಸೋಮವಾರದಂದು ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ದರ ಶೇ.9.07ರಷ್ಟಿದೆ. ಇಡೀ ವಾರದ ಪಾಸಿಟಿವ್ ದರ ಶೇ.9.04ರಷ್ಟಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಶಂಕರ್‌ಗೌಡ ಲಿಂಗರಾಜು ಅವಟಿ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x55 East, 40ಅಡಿ ರೋಡಿಗಿದೆ, 30x50 North, 30x40 East, 30x40 west, 70x40 Corner, 40 ಅಡಿರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
9916612110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x70 East, 60x40 West, 30x50 west, 30x48 East, 30x40 West, 40 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
9916612110

**ಸೈಟಿನ ಮೂಲ ಪತ್ರ ಕಳೆದಿದೆ**
ಕೆ.ಎಸ್. ಬಸವರಾಜಪ್ಪ ತಂದೆ ಶಿವಪ್ಪ ಹೆಸರಿನಲ್ಲಿರುವ ಸೈಟಿನ ಅಳತೆ : 37x70, ಪಂಚಾಯಿತಿ ಖಾತೆ ನಂ. 561/1, ನಿಟುವಳ್ಳಿ, ಲೆನಿನ್ ನಗರದಲ್ಲಿರುವ ಸೈಟಿನ ಮೂಲ ಪತ್ರವು ದಿನಾಂಕ : 31.05.2021ರ ಬೆಳಿಗ್ಗೆ 9.50 ಗಂಟೆಗೆ ಹದಡಿ ರೋಡಿನಲ್ಲಿ ಹೋಗುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
ಫೋ. :99861 38353

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
ದಾವಣಗೆರೆ ಜ್ಯುವೆಲರಿ ಅಸೋಸಿಯೇಷನ್
ರಾಜಕುಮಾರ್
ಧನ ಸಹಾಯ ಮಾಡುವವರು ಸಂಪರ್ಕಿಸಿ
99029 00027

**Wanted Teachers**
Qualification :
1) B.A. B.Ed - English - 01
2) B.Sc., B.Ed - PCM - 01 CBZ - 01
3) B.A., B.Ed - Hindi - 01
4) B.A. B.Ed - Social - 01
SJM English Medium Public School
80734 81049, 90197 38735

**ಮನೆ ಬಾಡಿಗೆಗೆ ಇದೆ**
# 3680/ ಎ, ಎಂ.ಸಿ.ಸಿ. "ಬಿ" ಬ್ಲಾಕ್, 1ನೇ ಫ್ಲೋರ್, 11ನೇ ಮೇನ್, 5ನೇ ಕ್ರಾಸ್, ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98456 92504

**2 ಬೆಡ್‌ರೂಂ ಮನೆ ಬೇಕಾಗಿದೆ**
ಪೂರ್ವ ಮತ್ತು ಉತ್ತರ ದಿಕ್ಕಿನ ಮನೆ ವಿನೋಬನಗರ, ದೇವರಾಜ್ ಅರಸ್ ಬಡಾವಣೆ, ನಿಜಲಿಂಗಪ್ಪ ಬಡಾವಣೆ, ಹೊಂಡದ ಸರ್ಕಲ್‌ನಲ್ಲಿ ಬೇಕಾಗಿದೆ. ಬಾಡಿಗೆಗೆ ಅಥವಾ ಮಾರಾಟಕ್ಕೆ. ಸಂಪರ್ಕಿಸಿ
74112 11032

**ಗೋಡೌನ್ ಬೇಕಾಗಿದೆ**
ದಾವಣಗೆರೆ ಎ.ಪಿ.ಎಂ.ಸಿ.ಯಾರ್ಡ್‌ನಲ್ಲಿ 5000 ಚದರ ಅಡಿ ವಿಸ್ತೀರ್ಣದ ಗೋಡೌನ್ ಬೇಕಾಗಿದೆ.ಸಂಪರ್ಕಿಸಿ
7406396332
7406740635

**Lab Technician Required**
M.Sc., food Technology or M.Sc. with B.Sc., CBZ
89042 43165, 83107 12150

**ಪವಾರ್ ಫ್ಯಾಮಿಲಿ**
ರೆಸ್ಟೋರೆಂಟ್ (ವೆಜ್, ನಾನ್ ವೆಜ್)
ಸಮಯ ಬೆಳಿಗ್ಗೆ : 11:00 ರಿಂದ ರಾತ್ರಿ 8.00 ವರೆಗೆ
ಪಾರ್ಸಲ್ ಮಾತ್ರ
ಡೋರ್ ಡೆಲಿವರಿ 30/- ರೂಪಾಯಿಗಳು
ಮೊ: 82170 57810, 73378 18258

**ಹೆಸರು ಬದಲಾವಣೆ**
ದಾವಣಗೆರೆ ವಿನೋಬನಗರ 4ನೇ ಮೇನ್, 2ನೇ ಕ್ರಾಸ್ (# 1932/2ಎ) ವಾಸಿ ಶ್ರೀಮತಿ ರತ್ನಮ್ಮ ಕೋಂ ಭರಮಪ್ಪ ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಬಿ.ಎನ್ ಗಂಗಮ್ಮ ಎಂದಿದ್ದು, ವಿವಾಹದ ನಂತರ ನನ್ನ ಹೆಸರನ್ನು ರತ್ನಮ್ಮ ಎಂದು ಬದಲಾಯಿಸಿ ಕೊಂಡಿದ್ದೇನೆ. ನನ್ನ ಹೆಸರು 'ರತ್ನಮ್ಮ'ಎಂದು ನಮೂದಾಗಿದೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳು ರತ್ನಮ್ಮ ಎಂಬ ಹೆಸರಿನಲ್ಲೇ ನಡೆಯುತ್ತವೆ ಎಂದು ದಿನಾಂಕ 31.05.2021 ರಂದು ದಾವಣಗೆರೆ ನೋಟರಿ ಸಮ್ಮುಖದಲ್ಲಿ ಪ್ರಮಾಣೀಕರಿಸಿದ್ದೇನೆ.
- ರತ್ನಮ್ಮ

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಕೊಳ್ಳೇಗಾಲದಿಂದ ನೇರ ಪರಿಹಾರ
89716 99826

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


### ಮೇನಲ್ಲಿ ಕೊರೊನಾ ಕರಾಳ

**ಒಂದೇ ತಿಂಗಳಲ್ಲಿ 88.82 ಲಕ್ಷ ಸೋಂಕು**

ನವದೆಹಲಿ, ಮೇ 31 – ಕಳೆದ ಮೇ ಒಂದೇ ತಿಂಗಳಲ್ಲಿ ದೇಶದಲ್ಲಿ 88.82 ಲಕ್ಷ ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಕೊರೊನಾ ವಿಷಯದಲ್ಲಿ ಮೇ ಅತ್ಯಂತ ಕರಾಳ ತಿಂಗಳಾಗಿದೆ.

ದೇಶದಲ್ಲಿ ಇದುವರೆಗೂ ಒಟ್ಟು 2.8 ಕೋಟಿ ಕೊರೊನಾ ಸೋಂಕಿತರು ಕಂಡು ಬಂದಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇವರಲ್ಲಿ ಶೇ.31.67ರಷ್ಟು ಮೇ ತಿಂಗಳಲ್ಲೇ ಪತ್ತೆಯಾಗಿದ್ದಾರೆ.

ಈ ತಿಂಗಳಲ್ಲಿ 1.17 ಲಕ್ಷ ಜನರು ಸಾವನ್ನಪ್ಪಿದ್ದಾರೆ. ಇದು ಒಟ್ಟು 3.29 ಲಕ್ಷ ಕೊರೊನಾ ಸಾವುಗಳ ಶೇ.35.63ರಷ್ಟಾಗಿದೆ.

ಮೇ 7ರಂದು ಇದುವರೆಗಿನ ಅತಿ ಹೆಚ್ಚಿನ 4.14 ಲಕ್ಷ ಪ್ರಕರಣಗಳು ಒಂದೇ ದಿನ ಕಂಡು ಬಂದಿದ್ದವು. ಮೇ 19ರಂದು ಒಂದೇ ದಿನ ಅತಿ ಹೆಚ್ಚಿನ 4,529 ಕೊರೊನಾ ಸಾವುಗಳು ಸಂಭವಿಸಿದ್ದವು.

ಮೇ 17ರ ನಂತರ ಪ್ರತಿದಿನ ಕಂಡು ಬರುವ ಕೊರೊನಾ ಸೋಂಕುಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಕಳೆದ ನಾಲ್ಕು ದಿನಗಳಿಂದ ದೈನಂದಿನ ಸೋಂಕುಗಳು ಎರಡು ಲಕ್ಷಕ್ಕಿಂತ ಕಡಿಮೆ ಇದೆ. ಮೇ 10ರಂದು ಸಕ್ರಿಯ ಸೋಂಕುಗಳ ಪ್ರಮಾಣ 37.45 ಲಕ್ಷದ ಅತಿ ಹೆಚ್ಚಿನ ಹಂತಕ್ಕೆ ತಲುಪಿತ್ತು.

ನಂತರ ಸೋಂಕು ತೀವ್ರತೆ ಇಳಿಕೆಯಾಗುತ್ತಾ ಬಂದು, ಸೋಮವಾರದಂದು 1.52 ಲಕ್ಷ ಪ್ರಕರಣಗಳು ಕಂಡು ಬಂದಿದ್ದವು. ಮೊದಲ ಅಲೆಯಲ್ಲಿ ಒಂದೇ ದಿನದ ಸೋಂಕು 1 ಲಕ್ಷದ ಗಡಿ ದಾಟಿರಲಿಲ್ಲ.


**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ (ಸಸ್ಯಹಾರಿ) ಭಟ್ಟರು ಬೇಕಾಗಿದ್ದಾರೆ.
ಸ್ವಾಮಿ ಹೋಟೆಲ್
ಶಾಮನೂರು ರಸ್ತೆ, ದಾವಣಗೆರೆ.
97434 82356


### ಮೇ ಫ್ಲವರ್ ಹೂವು

ಹೊನ್ನಾಳಿ, ಮೇ 31- ವರ್ಷಕ್ಕೆ ಒಂದು ಬಾರಿ ಅರಳುವ ಮೇ ಫ್ಲವರ್ ಹೂವು ಹೊನ್ನಾಳಿ ದೊಡ್ಡ ಪೇಟೆ ಪಟ್ಟಣಶೆಟ್ಟಿ ಪರಮೇಶ್‌ರವರ ಮನೆಯಲ್ಲಿ ಇಂದು ಅರಳಿರುವುದು.

# ಸುಪ್ರೀಂನಿಂದ 'ದೇಶದ್ರೋಹ' ವ್ಯಾಖ್ಯಾನ ಪರಿಶೀಲನೆ

**ದೇಶದ್ರೋಹ ಪ್ರಕರಣದಿಂದ ಮಾಧ್ಯಮ, ಅಭಿವ್ಯಕ್ತಿ ಮೇಲೆ ಪರಿಣಾಮ**

ನವದೆಹಲಿ, ಮೇ 31 – ಮಾಧ್ಯಮಗಳ ವಿರುದ್ಧ ದೇಶದ್ರೋಹ ಪ್ರಕರಣಗಳನ್ನು ದಾಖಲಿಸುತ್ತಿರುವ ಹಿನ್ನೆಲೆಯಲ್ಲಿ, ಅದರಿಂದ ಮಾಧ್ಯಮ ಹಕ್ಕು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಪರಿಣಾಮವಾಗುತ್ತಿರುವುದರಿಂದ ದೇಶ ದ್ರೋಹ ಸೆಕ್ಷನ್‌ನ ವ್ಯಾಖ್ಯಾನ ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ತೆಲುಗು ಸುದ್ದಿ ವಾಹಿನಿಗಳಾದ ಟಿವಿ5 ಹಾಗೂ ಎಬಿಎನ್ ಆಂಧ್ರಜ್ಯೋತಿ ವಿರುದ್ಧ ಆಂಧ್ರ ಪ್ರದೇಶ ಸರ್ಕಾರ ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಿತ್ತು. ವೈ.ಎಸ್.ಆರ್. ಕಾಂಗ್ರೆಸ್ ಬಂಡಾಯ ಸಂಸದ ಕೆ. ರಘು ರಾಮ ಕೃಷ್ಣ ರಾಜು ಅವರ ಆಕ್ಷೇಪಾರ್ಹ ಎನ್ನಲಾದ ಹೇಳಿಕೆಗಳನ್ನು ಪ್ರಸಾರ ಮಾಡಿದ ಕಾರಣಕ್ಕಾಗಿ ಪೊಲೀಸರು ಪ್ರಕರಣ ಹೂಡಿದ್ದರು.

ಈ ಕ್ರಮ ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ವಾಹಿನಿಗಳ ವಿರುದ್ಧ ಯಾವುದೇ ಬಲವಂತದ ಕ್ರಮ ತೆಗೆದುಕೊಳ್ಳದಂತೆ ನಿರ್ಬಂಧಿಸಿದೆ.

124ಎ (ದೇಶದ್ರೋಹ) ಹಾಗೂ 153 (ವರ್ಗಗಳ ನಡುವೆ ವೈರತ್ವ ತರುವ) ಸೆಕ್ಷನ್‌ಗಳ ವ್ಯಾಖ್ಯಾನ ಪರಿಶೀಲಿಸಬೇಕಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್.ಎನ್.ರಾವ್ ಹಾಗೂ ಎಸ್. ರವೀಂದ್ರ ಭಟ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಆಂಧ್ರ ಪ್ರದೇಶ ಪೊಲೀಸರು ಸುದ್ದಿ ವಾಹಿನಿಗಳು , ಉದ್ಯೋಗಿಗಳು ಇಲ್ಲವೇ ಸಿಬ್ಬಂದಿ ವಿರುದ್ಧ ಎಫ್.ಐ.ಆರ್. ಹಿನ್ನೆಲೆಯಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂದು ನಿರ್ಬಂಧಿಸಲಾಗಿದೆ.

ಈ ಬಗ್ಗೆ ಆಂಧ್ರ ಪ್ರದೇಶಕ್ಕೆ ನೋಟಿಸ್ ಕಳಿಸಿರುವ ನ್ಯಾಯಾಲಯ, ನಾಲ್ಕು ವಾರಗಳಲ್ಲಿ ಉತ್ತರಿಸುವಂತೆ ತಿಳಿಸಿದೆ.

### ಭರತ್ ಕಾಲೋನಿಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಹಬೆ ಯಂತ್ರ ವಿತರಣೆ



ದಾವಣಗೆರೆ, ಮೇ 31- ನಗರದ ಭರತ್ ಕಾಲೋನಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವಾಭಾರತಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಆಶಾ ಕಾರ್ಯಕರ್ತೆಯರಿಗೆ ಬಿಸಿ ನೀರಿನ ಹಬೆಯ ಯಂತ್ರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಡಾ.ವೆಂಕಟೇಶ್, ಪಾಲಿಕೆ ಸದಸ್ಯ ಶಿವಪ್ರಕಾಶ್, ರಾಷ್ಟ್ರೋತ್ಥಾನ ಶಾಲೆಯ ಜಯಣ್ಣ, ಸಿದ್ದಲಿಂಗ ಸ್ವಾಮಿ ಸೇವಾಭಾರತಿ ಟ್ರಸ್ಟ್‌ನ ಕಾರ್ಯದರ್ಶಿ ರಮೇಶ್, ಗಿರೀಶ್, ಅರುಣ ಗುಡ್ಡದಕೇರಿ ಹಾಗೂ ಮತ್ತಿತರರಿದ್ದರು.

### ಆರ್ಥಿಕತೆ ಶೇ.7.3ರ ಕುಸಿತ

**(1ನೇ ಪುಟದಿಂದ)** ಆರ್ಥಿಕ ಚಟುವಟಿಕೆಗಳಿಗೆ ತೀವ್ರ ಅಡ್ಡಿಯಾಗಿದೆ. ಹೀಗಾಗಿ ಈ ವರ್ಷ ಆರ್ಥಿಕ ಬೆಳವಣಿಗೆ ದರ ಎರಡಂಕಿ ತಲುಪುವ ಬಗ್ಗೆಯೂ ಅನುಮಾನಗಳಿವೆ.

ದೈನಂದಿನ ಕೊರೊನಾ ಪ್ರಕರಣಗಳು ಮೇ ತಿಂಗಳ ಆರಂಭದಲ್ಲಿ 4 ಲಕ್ಷದಷ್ಟಿದ್ದು, ಈಗ 1.5 ಲಕ್ಷಕ್ಕೆ ಇಳಿಕೆಯಾಗಿದೆ. ಆದರೂ, ಖರೀದಿ ಕಡಿಮೆಯಾಗಿದ್ದು, ನಿರುದ್ಯೋಗ ಶೇ.14.73ಕ್ಕೆ ತಲುಪಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಪ್ರಧಾನ ಆರ್ಥಿಕ ಸಲಹೆಗಾರ ಕೆ.ವಿ. ಸುಬ್ರಮಣ್ಯಂ, ಎರಡನೇ ಕೊರೊನಾ ಅಲೆಯಿಂದ ಆರ್ಥಿಕತೆಯ ಮೇಲೆ ಹೆಚ್ಚಿನ ಪರಿಣಾಮ ವಾಗುವುದಿಲ್ಲ. ಆದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿಯ ಬೆಳವಣಿಗೆ ಕಾಣುವುದು ಅನುಮಾನ ಎಂದಿದ್ದಾರೆ. 2020-21ರ ಆರ್ಥಿಕ ಸಮೀಕ್ಷೆಯಲ್ಲಿ ಈ ವರ್ಷದ ಆರ್ಥಿಕ ಬೆಳವಣಿಗೆ ಶೇ.11ರಷ್ಟಿರಲಿದೆ ಎಂದು ಅಂದಾಜಿಸಲಾಗಿತ್ತು

ಲಸಿಕೆ ಪ್ರಕ್ರಿಯೆ ತೀವ್ರಗೊಳಿಸುವ ಮೂಲಕ ಕೊರೊನಾದ ಇನ್ನೊಂದು ಅಲೆಯನ್ನು ತಡೆಯಬೇಕಿದೆ ಎಂದು ಸುಬ್ರಮಣ್ಯಂ ಅಭಿಪ್ರಾಯ ಪಟ್ಟಿದ್ದಾರೆ.

### ಕೃಷ್ಣಪಟ್ಣಂನ ಆಯುರ್ವೇದ ಔಷಧಿಗೆ ಆಂಧ್ರದ ಒಪ್ಪಿಗೆ

**(1ನೇ ಪುಟದಿಂದ)** ನಿರ್ಬಂಧಿಸಲಾಗಿದೆ.

ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಸಾಂಪ್ರ ದಾಯಿಕ ಮೂರು ಔಷಧಿಗಳಿಗೆ ಅನುಮತಿ ನೀಡಲಾಗಿದೆ. ಇವುಗಳಿಗೆ ಪಿ, ಎಲ್ ಹಾಗೂ ಎಫ್ ಎಂಬ ಹೆಸರಿಡಲಾಗಿದೆ.

ತಾವು ರೂಪಿಸಿರುವ ಔಷಧಿ ವಿಶಿಷ್ಟವಾಗಿದ್ದು, ಇದು ಯಾವುದೇ ಅಡ್ಡ ಪರಿಣಾಮವಿಲ್ಲದೇ ಕೆಲಸ ಮಾಡುವುದು ಸಾಬೀತಾಗಿದೆ ಎಂದು ಆನಂದಯ್ಯ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಔಷಧಿಗೆ ಅನುಮತಿ ನೀಡಿರುವುದನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ನಾನು ಹಲವಾರು ವರ್ಷಗಳಿಂದ ಆಯುರ್ವೇದ ವೈದ್ಯನಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಹೇಳಿರುವ ಆನಂದಯ್ಯ, ಔಷಧ ನೀಡಲು ಹೊಸದಾಗಿ ಅನುಮತಿ ಪಡೆಯಬೇಕಿಲ್ಲ. ತಾವು ಈ ಔಷಧವನ್ನು ವಾಣಿಜ್ಯ ಉದ್ದೇಶದಿಂದ ಮಾರುತ್ತಿಲ್ಲ. ಸಾರ್ವಜನಿಕವಾಗಿ ಉಚಿತವಾಗಿ ವಿತರಿಸುತ್ತಿದ್ದೇನೆ ಎಂದಿದ್ದರು.

ಹೈಕೋರ್ಟ್ ವಿಚಾರಣೆ ನಡೆಸುತ್ತಿರುವ ಮಧ್ಯೆಯೇ ರಾಜ್ಯ ಸರ್ಕಾರ ಅನುಮತಿಯ ನಿರ್ಧಾರ ತೆಗೆದುಕೊಂಡಿದೆ.

ಕೆ ಎಂಬ ಔಷಧ ಸಿದ್ಧಪಡಿಸಿದ ಬಗ್ಗೆ ಆನಂದಯ್ಯ ಪ್ರಾತ್ಯಕ್ಷಿಕೆ ನೀಡಿಲ್ಲ. ಹೀಗಾಗಿ ಆ ಔಷಧಿಗೆ ಸರ್ಕಾರ ಅನುಮತಿ ನೀಡಿಲ್ಲ. ಆನಂದಯ್ಯ ನೀಡುವ ಔಷಧಿ ಕೃಷ್ಣಪಟ್ನಂ ಔಷಧಿ ಎಂದೇ ಹೆಸರಾಗಿದೆ.

ಕೇಂದ್ರ ಆಯುರ್ವೇದ ಸಂಶೋಧನಾ ಮಂಡಳಿಯ ವರದಿಯನ್ನು ಆಧರಿಸಿ ಅನುಮತಿ ನೀಡಿರುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಆದರೆ, ಅನುಮತಿ ನೀಡಲಾದ ಔಷಧಿ ಕೊರೊನಾ ಗುಣಪಡಿಸುತ್ತದೆ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದು ಮಂಡಳಿ ವರದಿ ತಿಳಿಸಿದೆ.

ವೈದ್ಯರು ನೀಡುವ ಔಷಧಿಗಳ ಜೊತೆಗೆ ಪೂರಕವಾಗಿ ಜನರು ಕೃಷ್ಣಪಟ್ನಂ ಔಷಧಿ ಪಡೆಯಬಹುದು. ಇದು ವೈಯಕ್ತಿಕ ಇಷ್ಟಕ್ಕೆ ಬಿಟ್ಟದ್ದು ಎಂದು ರಾಜ್ಯ ಸರ್ಕಾರ ಹೇಳಿದೆ.


## ಭಾವಪೂರ್ಣ ಶ್ರದ್ಧಾಂಜಲಿ





ಶ್ರೀ ಶಂಭಣ್ಣ (ಕರಿಬಸಪ್ಪ)

ದಿನಾಂಕ 29.05.2021ರ ಶನಿವಾರದಂದು ನಿಧನರಾದ ಕುರುಬ ಸಮಾಜದ ಹಿರಿಯ ಮುತ್ಸದ್ದಿ, ಕರ್ನಾಟಕ ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರೂ, ಜಿಲ್ಲಾ ಕುರುಬರ ಸಂಘದ ಜಿಲ್ಲಾಧ್ಯಕ್ಷರೂ, ಕರ್ನಾಟಕ ಕುರುಬರ ಸಂಘದ ನಿರ್ದೇಶಕರಾದ
**ಶ್ರೀ ಕೆಂಗೋ ಹನುಮಂತಪ್ಪ** ಅವರಿಗೂ
ಮತ್ತು ಯಕ್ಕನಹಳ್ಳಿ ಗ್ರಾಮದ ಬೀರಲಿಂಗೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕರು, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ನಿರ್ದೇಶಕರು, ಸಮಾಜದ ಹಿರಿಯ ಮುಖಂಡರಾದ
**ಶ್ರೀ ಶಂಭಣ್ಣ (ಕರಿಬಸಪ್ಪ)** ಅವರಿಗೂ
ಭಾವಪೂರ್ಣ ಶ್ರದ್ಧಾಂಜಲಿಗಳು. ಶ್ರೀಯುತರ ಕುಟುಂಬ ವರ್ಗಕ್ಕೆ ಭಗವಂತನು ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತಾ, ನಿಮ್ಮ ತತ್ವ, ಆದರ್ಶಗಳು ನಮಗೆಲ್ಲಾ ದಾರಿದೀಪವಾಗಿವೆ. ನಿಮ್ಮ ಆಶಯದಂತೆ ನಡೆಯುತ್ತೇವೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

**ದಾವಣಗೆರೆ ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ (ರಿ.)**
**ಹದಡಿ ರಸ್ತೆ, ದಾವಣಗೆರೆ.**

ವಿರೂಪಾಕ್ಷಪ್ಪ ವೈ. – ಅಧ್ಯಕ್ಷರು
ಎಸ್.ಹೆಚ್. ಪ್ರಕಾಶ್ – ಗೌರವ ಕಾರ್ಯದರ್ಶಿ
ಹಾಲೇಕಲ್ ಎಸ್.ಟಿ. ಅರವಿಂದ – ಉಪಾಧ್ಯಕ್ಷರು
ಕೆ. ಸಿದ್ದಪ್ಪ – ಉಪಾಧ್ಯಕ್ಷರು
ಐರಣಿ ಅಣ್ಣೇಶ್ – ಖಜಾಂಚಿ

ನಿರ್ದೇಶಕರು, ಮಾಜಿ ಅಧ್ಯಕ್ಷರುಗಳು, ಮಾಜಿ ಉಪಾಧ್ಯಕ್ಷರುಗಳು, ಮಾಜಿ ಕಾರ್ಯದರ್ಶಿಗಳು, ಮಾಜಿ ಖಜಾಂಚಿಗಳು, ಮಾಜಿ ನಿರ್ದೇಶಕರುಗಳು ಹಾಗೂ ಸಮಾಜ ಬಾಂಧವರು

**ಶ್ರೀ ಬೀರಲಿಂಗೇಶ್ವರ ಪದವಿ ಪೂರ್ವ ಕಾಲೇಜ್, ದಾವಣಗೆರೆ.**
ಪ್ರಾಂಶುಪಾಲರು, ಹೆಚ್.ಎಸ್. ರಾಜಶೇಖರ್ ಹಾಗೂ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು

## ಭಾವಪೂರ್ಣ ಶ್ರದ್ಧಾಂಜಲಿ



ನಿನ್ನೆ ನಿಧನರಾದ ನಮ್ಮ ಬಂಧುಗಳಾದ
**ಶ್ರೀ ಎ.ಜಿ. ಜಗದೀಶ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

♦ಶ್ರೀಮತಿ ಪುಷ್ಪ ಚಿಂದೋಡಿ ವೀರಣ್ಣ ಮತ್ತು ಮಕ್ಕಳು, ದಾವಣಗೆರೆ
♦ಶ್ರೀಮತಿ ಗೀತಾ ಟಿ ಡಿ ಮಂಜುನಾಥ್ ಮತ್ತು ಮಕ್ಕಳು, ಮಲೇಬೆನ್ನೂರು
♦ಶ್ರೀಮತಿ ಮತ್ತು ಶ್ರೀ ಶ್ರೀಕಾಂತ್ ಮತ್ತು ಮಕ್ಕಳು, ಪೂಜಾ ಟೈಲರ್, ದಾವಣಗೆರೆ

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಜಿ. ಹನುಮಂತಪ್ಪ ಕುಂದೂರು**
ಅಧ್ಯಕ್ಷರು ಜಿಲ್ಲಾ ಕೃಷಿಕ ಸಮಾಜ, ದಾವಣಗೆರೆ ಜಿಲ್ಲೆ.

ಹಿರಿಯ ಮುತ್ಸದ್ಧಿಗಳೂ, ರೈತರ ಹಿತ ಚಿಂತಕರೂ, ಉತ್ತಮ ಬಾಂಧವ್ಯ ಹೊಂದಿದವರೂ ಆದ ಶ್ರೀ ಜಿ. ಹನುಮಂತಪ್ಪ ಕುಂದೂರು ಅವರಿಗೆ ನಮ್ಮಗಳ ಭಾವಪೂರ್ಣ ಶ್ರದ್ಧಾಂಜಲಿಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ತಮ್ಮ ಅಭಿಮಾನಿಗಳು
**ಎನ್.ಜಿ. ಪುಟ್ಟಸ್ವಾಮಿ**
ರೈತ ಮುಖಂಡರು ಹಾಗೂ ಬಿಜೆಪಿ ಪಕ್ಷದ ಹಿರಿಯ ಮುಖಂಡರು, ದಾವಣಗೆರೆ.
**ಹೆಚ್.ಆರ್. ಲಿಂಗರಾಜ್ ಶಾಮನೂರು**
ಜಿಲ್ಲಾ ಅಧ್ಯಕ್ಷರು, ಭಾರತೀಯ ರೈತ ಒಕ್ಕೂಟ ಹಾಗೂ ಸದಸ್ಯರು, ಜಿಲ್ಲಾ ಕೃಷಿಕ ಸಮಾಜ, ದಾವಣಗೆರೆ.


### ಜೂನ್‌ವರೆಗೆ ಲಾಕ್ ವಿಸ್ತರಿಸಿ

**(1ನೇ ಪುಟದಿಂದ)** ಪ್ರಮಾಣದಲ್ಲಿದೆ.

ಮೈಸೂರು ಜಿಲ್ಲೆಯಲ್ಲಿ ಶೇ. 40 ರಷ್ಟು ಪಾಸಿಟಿವಿಟಿ ಕಂಡುಬಂದರೆ, ಉಳಿದ ಆರು ಜಿಲ್ಲೆಗಳು ಶೇ. 23 ರಿಂದ 35 ರವರೆಗೂ ಪಾಸಿಟಿವಿಟಿ ಇದೆ. ಇದರ ಪ್ರಮಾಣ ಶೇ. 5ಕ್ಕೆ ಇಳಿಕೆಯಾಗುವವರೆಗೂ ಸರ್ಕಾರ ಬಿಗಿ ನಿಲುವನ್ನೇ ಅನುಸರಿಸಬೇಕು.

ಆಸ್ಟ್ರೇಲಿಯಾ ಮಾದರಿಯನ್ನು ಆಧಾರವಾಗಿಟ್ಟುಕೊಂಡು ತಜ್ಞರು ಕೆಲವು ಸಲಹೆ, ಸೂಚನೆಗಳನ್ನು ಸರ್ಕಾರಕ್ಕೆ ಇಂದು ಸಲ್ಲಿಸಿದ್ದಾರೆ.

ಈ ವರದಿಯ ಬಗ್ಗೆ ಮುಖ್ಯಮಂತ್ರಿಯವರು ಜೂನ್ 4 ಇಲ್ಲವೇ 5 ರಂದು ತಾಂತ್ರಿಕ ಸಲಹಾ ಸಮಿತಿ ಸದಸ್ಯರು, ಅಧಿಕಾರಿಗಳು ಮತ್ತು ಸಚಿವರೊಟ್ಟಿಗೆ ಚರ್ಚಿಸಿ, ಲಾಕ್‌ಡೌನ್ ವಿಸ್ತರಿಸುವ ಇಲ್ಲವೇ ಸಡಿಲಿಸುವ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ.

ಕಳೆದ ಏಪ್ರಿಲ್ 27 ರಿಂದ ಒಂದಲ್ಲಾ ಒಂದು ರೀತಿ ಬಿಗಿ ಕ್ರಮ ಕೈಗೊಂಡಿದ್ದರಿಂದ ಶೇ. 40 ರಿಂದ 45 ರಷ್ಟು ಪಾಸಿಟಿವಿಟಿ ಇದ್ದಿದ್ದು, ಪ್ರಸ್ತುತ ಶೇಕಡ 14ಕ್ಕೆ ಇಳಿದಿದೆ. ಆದರೆ, ಮರಣ ಪ್ರಮಾಣ ಹೆಚ್ಚಿದೆ.

ಗ್ರಾಮೀಣ ಭಾಗದಲ್ಲಿ ಸೋಂಕು ವ್ಯಾಪಕವಾಗಿ ಹರಡಿದೆ. ಸೋಂಕು ತಹಬದಿಗೆ ಬರುವವರೆಗೂ ಇದೇ ನಿಲುವನ್ನು ಬಿಗಿಗೊಳಿಸಿ.

ಜೂನ್ 15 ರ ವೇಳೆಗೆ ಸೋಂಕಿನ ಇಳಿಕೆ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಅದಾದ ನಂತರ ಲಾಕ್‌ಡೌನ್ ಸಡಿಲಿಕೆ ಬಗ್ಗೆ ತೀರ್ಮಾನ ಕೈಗೊಳ್ಳಿ.

ಸಡಿಲಿಕೆಯಾದರೂ ಮೈಸೂರು ಜಿಲ್ಲೆ ಸೇರಿದಂತೆ ಸೋಂಕು ಹೆಚ್ಚಿರುವ ಏಳು ಜಿಲ್ಲೆಗಳ ಬಿಗಿ ಕ್ರಮ ಹಾಗೆಯೇ ಮುಂದುವರೆಯಲಿ.

ಮಹಾರಾಷ್ಟ್ರ ಮಾದರಿಯಂತೆ ಈ ಜಿಲ್ಲೆಗಳ ಗಡಿಗಳನ್ನು ಬಂದ್ ಮಾಡಿ, ಅಗತ್ಯ ಸೇವೆ ಹೊರತುಪಡಿಸಿ, ಉಳಿದೆಲ್ಲವೂ ಬಂದ್ ಆಗಲಿ ಎಂದಿದ್ದಾರೆ.

ಇನ್ನು ನಮ್ಮ ಮುಂದೆ 3ನೇ ಅಲೆ ಇದೆ. ತಡೆಗಟ್ಟಲು ಮುಂಜಾಗ್ರತಾ ಕ್ರಮ ಅವಶ್ಯ. ಅಲ್ಲದೆ ಸೋಂಕಿತರಿಗಾಗಿ ಅಗತ್ಯವಿರುವ ಬೆಡ್ ಪ್ರಮಾಣ, ಆಕ್ಸಿಜನ್, ಐಸಿಯು ಬೆಡ್, ಸಿಸಿಸಿಗಳನ್ನು ಸರ್ಕಾರ ಏರಿಕೆ ಮಾಡಬೇಕು. ಕೋವಿಡ್ ನಿರ್ವಹಣೆಗೆ ಬೇಕಾಗಿರುವ ಮೂಲಸೌಕರ್ಯಗಳನ್ನು ವೇಗವಾಗಿ ವೃದ್ಧಿಸಿಕೊಳ್ಳಿ ಎಂದಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಅವರು ಲಾಕ್‌ಡೌನ್ ವಿಚಾರಕ್ಕೆ ಸಂಬಂಧಿಸಿದಂತೆ ಜೂನ್ 4 ಮತ್ತು 5 ರ ಬಳಿಕ ಚರ್ಚೆ ಮಾಡಿ, ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಬ್ಲ್ಯಾಕ್ ಫಂಗಸ್ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

# ವಿಶೇಷ ಭತ್ಯೆ ನೀಡಿದಿದ್ದರೆ ಆಯುಷ್ ವೈದ್ಯರಿಂದ ಕೋವಿಡ್ ಕಾರ್ಯ ಸ್ಥಗಿತ

ದಾವಣಗೆರೆ, ಮೇ 31 - ಎಂಬಿಬಿಎಸ್ ಮತ್ತು ಬಿಡಿಎಸ್ ವೈದ್ಯಾಧಿಕಾರಿಗಳಿಗೆ ನೀಡಿರುವ ವಿಶೇಷ ಭತ್ಯೆ ರೀತಿಯಲ್ಲೇ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆ ನೀಡುವಂತೆ ಜಿಲ್ಲಾ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆ ಹೆಚ್ಚಿಸಿ ಆದೇಶಿಸಲಾಗಿದೆ. ಅಲ್ಲದೇ ಕಾಲಕಾಲಕ್ಕೆ ನೀಡಲಾಗುವ ವೇತನ, ಭತ್ಯೆ, ಸ್ಥಾನಮಾನಗಳನ್ನು ಆಯುಷ್ ವೈದ್ಯಾಧಿಕಾರಿಗಳಿಗೂ ವಿಸ್ತರಿಸಬೇಕೆಂದು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಹೀಗಿದ್ದೂ ಆರೋಗ್ಯ ಇಲಾಖೆಯ ಆದೇಶದಲ್ಲಿ ಆಯುಷ್ ವೈದ್ಯಾಧಿಕಾರಿಗಳನ್ನು ಹೊರತುಪಡಿಸಿ ಎಂಬಿಬಿಎಸ್ ಹಾಗೂ ಬಿಡಿಎಸ್ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆಯನ್ನು ನೀಡಿರುವುದು ಅಸಮಂಜಸ ಎಂದು ಸಂಘವು ಅಸಮಾಧಾನ ವ್ಯಕ್ತ ಪಡಿಸಿದೆ.

**ಅಸಮರ್ಥನೀಯ :** ಕೊರೋನಾ ವೈರಾಣುವಿನ ಹಾವಳಿಯ ಸಂದರ್ಭದಲ್ಲಿ ಸರ್ಕಾರವು ಪ್ರತಿಯೊಬ್ಬ ಅಲೋಪಥಿ ಮತ್ತು ಆಯುಷ್ ವೈದ್ಯಾಧಿಕಾರಿಗಳನ್ನು ವಿವಿಧ ಜವಾಬ್ದಾರಿಗಳ ನಿರ್ವಹಣೆಗೆ ನಿಯೋಜಿಸಿದೆ. ಸರ್ಕಾರವು ಹೊರಿಸಿದ ಹೊಣೆಗಾರಿಕೆಯಿಂದ ಪ್ರತಿಯೊಬ್ಬ ಆಯುಷ್ ವೈದ್ಯಾಧಿಕಾರಿ ಹಿಂಜರಿಯದೆ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನಿಭಾಯಿಸುತ್ತಿದ್ದಾರೆ.

ಈ ಕುರಿತು ಕರ್ನಾಟಕ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘವು ಹಲವಾರು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಅಲ್ಲದೇ ಈ ತಾರತಮ್ಯ ನೀತಿಯನ್ನು ಹೋಗಲಾಡಿಸಿ ಮೇ 31ರೊಳಗೆ ಆದೇಶ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ.

ಈ ಬೇಡಿಕೆ ಈಡೇರದಿದ್ದರೆ ಜೂನ್ 1 ರಿಂದ ಕಪ್ಪು ಪಟ್ಟಿ ಧರಿಸುವ ಮೂಲಕ ಪ್ರತಿಭಟನಾ ನಿರತರಾಗಿ ಕರ್ತವ್ಯ ನಿರ್ವಹಿಸಲಿದ್ದೇವೆ. ಶೀಘ್ರವೇ ಸರ್ಕಾರ ಆಯುಷ್ ವೈದ್ಯಾಧಿಕಾರಿಗಳ ಬೇಡಿಕೆ ಈಡೇರಿಸದಿದ್ದರೆ ಜೂನ್ 7ರಿಂದ ಕೋವಿಡ್ ಸಂಬಂಧಿತ ಎಲ್ಲಾ ಕೆಲಸ ಕಾರ್ಯ ಬಹಿಷ್ಕರಿಸಿ ಕೇವಲ ಆಯುಷ್ ಇಲಾಖೆಯ ಚಿಕಿತ್ಸಾಲಯ, ಆಸ್ಪತ್ರೆಗಳಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸಲಾಗುವುದು ಎಂದು ತಿಳಿಸಿದೆ.

ಕಾರಣ, ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆ ನೀಡುವಂತೆ ಜಿಲ್ಲಾ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ಗೌರವಾಧ್ಯಕ್ಷ ಡಾ.ಶಂಕರಗೌಡ, ಅಧ್ಯಕ್ಷ ಡಾ.ಬಿ.ಎಸ್. ಮಲ್ಲಿಕಾರ್ಜುನ್, ಉಪಾಧ್ಯಕ್ಷೆ ಡಾ.ಎಸ್.ಎಸ್.ಸುಚಿತ್ರ, ಪ್ರಧಾನ ಕಾರ್ಯದರ್ಶಿ ಡಾ.ಸಿದ್ದೇಶ್ ಈ.ಬಿಸನಳ್ಳಿ, ಖಜಾಂಚಿ ಡಾ.ಎಂ.ಸಿ.ಸುರೇಶ್‌ಕುಮಾರ್, ಸಹ ಕಾರ್ಯದರ್ಶಿ ಡಾ.ರೇವ್ಯಾನಾಯ್ಕ, ಸಂಘಟನಾ ಕಾರ್ಯದರ್ಶಿ ಡಾ.ಸೈಯ್ಯದ್ ಶಂಷುದ್ದೀನ್, ರಾಜ್ಯ ಸಂಘದ ಪ್ರತಿನಿಧಿಗಳಾದ ಡಾ.ಚಂದ್ರಕಾಂತ್ ಎಸ್. ನಾಗಸಮುದ್ರ, ಡಾ.ಬಿ.ಯು.ಯೋಗೇಂದ್ರ ಕುಮಾರ್, ವಿವಿಧ ತಾಲ್ಲೂಕುಗಳ ಪ್ರತಿನಿಧಿಗಳಾದ ದಾವಣಗೆರೆಯ ಡಾ.ಬಿ.ಹೆಚ್.ದ್ಯಾವನಗೌಡರ, ನ್ಯಾಮತಿಯ ಡಾ.ಎನ್. ಕೆ.ಲಿಂಗರಾಜೇಂದ್ರ, ಹೊನ್ನಾಳಿಯ ಡಾ.ಯಶವಂತ್, ಚನ್ನಗಿರಿಯ ಡಾ.ಕೆ.ಸದಾಶಿವ, ಹರಿಹರದ ಡಾ.ಯೋಗೀಶ್ವರಗೌಡ ಮನವಿ ಮಾಡಿದ್ದಾರೆ.

## ಬಾಕಿ ಬಿಲ್ ಪಾವತಿಗೆ ಒತ್ತಡ

# ಮೃತ ವ್ಯಕ್ತಿಯ ಶವ ಹಸ್ತಾಂತರಕ್ಕೆ ನಿರಾಕರಣೆ

### ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಮಧ್ಯಪ್ರವೇಶದಿಂದ ಸಮಸ್ಯೆಗೆ ಪರಿಹಾರ

ದಾವಣಗೆರೆ, ಮೇ 31- ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಶವವನ್ನು ಹಸ್ತಾಂತರಿಸುವ ವೇಳೆ ಆಸ್ಪತ್ರೆಯ ಬಾಕಿ ಬಿಲ್ ಪಾವತಿಗೆ ಒತ್ತಡ ಹೇರುವಂತಿಲ್ಲ ಮತ್ತು ಬಿಲ್ ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಶವ ಹಸ್ತಾಂತರಿಸಲು ನಿರಾಕರಿಸುವಂತಿಲ್ಲ ಎಂಬ ಸರ್ಕಾರದ ಆದೇಶವಿದೆ.

ಹೀಗಿದ್ದರೂ ಸಹ ಸರ್ಕಾರದ ಆದೇಶ ಪಾಲಿಸದೇ ಮೃತಪಟ್ಟ ವ್ಯಕ್ತಿಯ ಶವವನ್ನು ಹಸ್ತಾಂತರಿಸದೇ ಆಸ್ಪತ್ರೆಯ ಬಾಕಿ ಬಿಲ್ ಪಾವತಿಗೆ ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಒತ್ತಡ ಹಾಕಿದ ಹಿನ್ನೆಲೆಯಲ್ಲಿ ಕೊನೆಗೆ ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಮಧ್ಯಪ್ರವೇಶದಿಂದ ಆಸ್ಪತ್ರೆಯ ಬಿಲ್ ಪಾವತಿ ಜೊತೆಗೆ ಮೃತದೇಹವನ್ನು ವಾರಸುದಾರರಿಗೆ ಸಿಗುವಂತಾದ ಘಟನೆ ನಗರದಲ್ಲಿಂದು ರಾತ್ರಿ ನಡೆದಿದೆ.

ಮತ್ತಿ ಗ್ರಾಮದ ರಾಮಚಂದ್ರಪ್ಪ ಎಂಬಾತನನ್ನು ಶುಗರ್ ಜಾಸ್ತಿಯಾದ ಕಾರಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರು ದಿನಗಳ ನಂತರ ರಾಮಚಂದ್ರಪ್ಪ ಅವರು ಕೋವಿಡ್ ನಿಂದ ಮೃತಪಟ್ಟಿದ್ದಾರೆನ್ನಲಾಗಿದೆ. ಹೀಗಾಗಿ ವೈದ್ಯಕೀಯ ವೆಚ್ಚ 2.80 ಲಕ್ಷ ಕೊಡದೇ ಶವವನ್ನು ಕೊಡುವುದಿಲ್ಲ ಎಂದು ಖಾಸಗಿ ಆಸ್ಪತ್ರೆಯವರು ಹೇಳಿದ್ದರು ಎಂದು ತಿಳಿದು ಬಂದಿದೆ.

ಈ ವಿಚಾರವಾಗಿ ಸಹಾಯ ಮಾಡುವಂತೆ ಸಾಮಾಜಿಕ ಹೋರಾಟಗಾರ ಎಂ.ಜಿ. ಶ್ರೀಕಾಂತ್ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರು. ಈ ಹಿನ್ನೆಲೆ ಪತ್ರಕರ್ತರು ಸಹ ಈ ವಿಚಾರವಾಗಿ ಗಮನಹರಿಸಿ ಮೃತ ವ್ಯಕ್ತಿಯ ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರು. ಈ ಹಂತದಲ್ಲಿ ಕೋವಿಡ್ ಸೋಂಕಿನಿಂದ ಮೃತಪಟ್ಟಲ್ಲಿ ಖಾಸಗಿ ಆಸ್ಪತ್ರೆಯವರು ಚಿಕಿತ್ಸೆಯ ಬಾಕಿ ವೆಚ್ಚದ ಪಾವತಿಗೆ ಒತ್ತಡ ಹೇರುವಂತಿಲ್ಲ. ಬಾಕಿ ಪಾವತಿಸದಿದ್ದ ಪಕ್ಷದಲ್ಲಿ ಮೃತದೇಹ ಹಸ್ತಾಂತರಿಸಲು ನಿರಾಕರಿಸುವಂತಿಲ್ಲ ಎಂಬ ಉಲ್ಲೇಖದ ಆದೇಶದಂತೆ ಕ್ರಮಕೈಗೊಳ್ಳಲು ಪತ್ರಕರ್ತರು ಆಗ್ರಹಿಸಿದರು.

ಜಿಲ್ಲಾಧಿಕಾರಿಗಳು ಡಿಹೆಚ್‌ಓ ಅವರಿಗೆ ಸರ್ಕಾರದ ಆದೇಶ ಉಲ್ಲಂಘಿಸಿದರೆ ಕ್ರಮ ಜರುಗಿಸಲು ಆದೇಶಿಸಿದರು. ಅಂತೆಯೇ ಡಿಹೆಚ್‌ಓ ಖಾಸಗಿ ಆಸ್ಪತ್ರೆಗೆ ತೆರಳಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದರು. ಈ ಎಲ್ಲಾ ಪ್ರಸಂಗಗಳ ನಂತರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ತಕ್ಷಣವೇ ಆ ಖಾಸಗಿ ಆಸ್ಪತ್ರೆಗೆ ತೆರಳಿ ಸರ್ಕಾರದ ಆದೇಶದಂತೆ ಕ್ರಮ ವಹಿಸಲು ಸೂಚಿಸಿದ ಮೇರೆಗೆ ಆಸ್ಪತ್ರೆಗೆ ತೆರಳಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಜಿ.ಡಿ. ರಾಘವನ್ ಹಾಗೂ ಸ್ಥಳಕ್ಕಾಗಮಿಸಿದ ಕೆಟಿಜೆ ನಗರ ಪಿಎಸ್‌ಐ ವೀರೇಶ್ ಸಮ್ಮುಖದಲ್ಲಿ ಮಾತುಕತೆ ನಡೆದು ಮೃತದೇಹವನ್ನು ಹಸ್ತಾಂತರಿಸಲಾಯಿತು.

ಹಾಗೆಯೇ ಎರಡೂವರೆ ಲಕ್ಷ ಆಗಿದ್ದ ಆಸ್ಪತ್ರೆ ಬಿಲ್ ಅನ್ನು ಕೇವಲ 50 ಸಾವಿರ ಕೊಡುವಂತೆ ಮಾಡಲಾಯಿತು. ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಮೃತ ವ್ಯಕ್ತಿಯ ದೇಹವನ್ನು ಹಸ್ತಾಂತರಿಸುವ ವೇಳೆ ಆಸ್ಪತ್ರೆಯ ಬಾಕಿ ಬಿಲ್ ಪಾವತಿಗೆ ಒತ್ತಡ ಹೇರಿದರೆ ಹಾಗೂ ಬಿಲ್ ಪಾವತಿ ಮಾಡದೆ ಇದ್ದ ಪಕ್ಷದಲ್ಲಿ ಮೃತದೇಹದ ಹಸ್ತಾಂತರ ಮಾಡಲು ನಿರಾಕರಸಿದರೆ ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ (ಕೆಪಿಎಂಇ) ನಿಯಮಾನುಸಾರ ಸದರಿ ಆಸ್ಪತ್ರೆಯ ನೋಂದಣಿಯನ್ನು ರದ್ದುಗೊಳಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಆದೇಶವಿದೆ. ಹೀಗೆ ಮಾಡಿರುವ ಖಾಸಗಿ ಆಸ್ಪತ್ರೆ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ಎಂಬ ಮಾಹಿತಿ ನಿರೀಕ್ಷಿಸಲಾಗಿದೆ.

# ಗ್ರಾ.ಪಂ.ಗಳಿಗೆ ಬಿ.ಪಿ.ಹರೀಶ್ ಭೇಟಿ

## ಕೊರೊನಾ ನಿಯಂತ್ರಣ ಕ್ರಮಗಳ ಕುರಿತು ಚರ್ಚೆ



ಮಲೇಬೆನ್ನೂರು, ಮೇ 31- ಗ್ರಾಮೀಣ ಪ್ರದೇಶದಲ್ಲಿ ವ್ಯಾಪಿಸಿರುವ ಮಹಾಮಾರಿ ಕೊರೊನಾ 2ನೇ ಅಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್ ಅವರು, ತಾಲ್ಲೂಕಿನ ವಿವಿಧ ಗ್ರಾ.ಪಂ. ಗಳಿಗೆ ಇಂದು ಭೇಟಿ ನೀಡಿ, ಚರ್ಚಿಸಿದರು.

ಸಾಲಕಟ್ಟೆ, ಕುಣೆಬೆಳಕೆರೆ, ದೇವರಬೆಳಕೆರೆ, ಹರಳಹಳ್ಳಿ, ಹಾಲಿವಾಣ ಗ್ರಾಮ ಪಂಚಾಯ್ತಿಗಳಿಗೆ ಭೇಟಿ ನೀಡಿದ ಹರೀಶ್ ಅವರು ಸೋಂಕು ಹರಡದಂತೆ ಗ್ರಾಮೀಣ ಟಾಸ್ಕ್‌ಫೋರ್ಸ್ ಸಮಿತಿಗಳು ಶ್ರಮವಹಿಸಿ, ಕೆಲಸ ಮಾಡುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವವರಿಗೆ ಆರಂಭದಲ್ಲಿ ಟೋಕನ್ ನೀಡುವಂತೆ ಸಲಹೆ ನೀಡಿ, ಅಲ್ಲಿನ ಗೊಂದಲಕ್ಕೆ ತೆರೆ ಎಳೆದರು.

ಹರೀಶ್ ಅವರ ಭೇಟಿ ವೇಳೆಯಲ್ಲಿ ಆಯಾ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಿಡಿಓ ಆಶಾ ಕಾರ್ಯಕರ್ತೆಯರು, ಸ್ಥಳೀಯ ಮುಖಂಡರು ಹಾಜರಿದ್ದರು.

ಕಳೆದ 4-5 ದಿನಗಳಿಂದ ಗ್ರಾಮಗಳಲ್ಲಿ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಬರುತ್ತಿರುವುದು ಸಮಾಧಾನ ತಂದಿದೆ ಎಂಬ ವಿಷಯವನ್ನು ಹರೀಶ್ ಅವರ ಗಮನಕ್ಕೆ ತಂದರು.

# ಹರಿಹರ ತಾ.ನಲ್ಲಿ 76 ಪಾಸಿಟಿವ್

ಮಲೇಬೆನ್ನೂರು, ಮೇ 31 -ಮಹಾಮಾರಿ ಕೊರೊನಾ 2ನೇ ಅಲೆ ಇಳಿಮುಖವಾಗಿದ್ದು, ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೋಮವಾರ 13 ಜನರು ಮಾತ್ರ ಕೋವಿಡ್ ಟೆಸ್ಟ್‌ಗೆ ಒಳಗಾಗಿದ್ದ ಮೂವರಿಗೆ ಪಾಸಿಟಿವ್ ಬಂದಿದೆ.

ಇವತ್ತು ಕೂಡಾ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆ ನೀಡಲಾಗಿದ್ದು ಮಂಗಳವಾರ ಕೋವಿಶೀಲ್ಡ್ ಮೊದಲ ಡೋಸ್ ನೀಡುವ ಸಾಧ್ಯತೆ ಇದೆ ಎಂದು ವೈದ್ಯ ಡಾ. ನಿಸಾರ್ ತಿಳಿಸಿದ್ದಾರೆ.

ಹರಳಹಳ್ಳಿ 88 ಜನರಿಗೆ ಕೋವಿಶಿಲ್ಡ್ ಮೊದಲ ಡೋಸನ್ನು ಸೋಮವಾರ ನೀಡಲಾಯಿತು. ಹರಿಹರ ತಾಲ್ಲೂಕಿನಲ್ಲಿ ಬೆಳಗಿನ ವರದಿ ಪ್ರಕಾರ 76 ಜನರಿಗೆ ಸೋಂಕು ದೃಢಪಟ್ಟಿದೆ, ಮಂಗಳವಾರ ಸಂಜೆ ವೇಳೆಗೆ 290 ಜನರಿಗೆ ಟೆಸ್ಟ್ ಮಾಡಿದ್ದು ರ್‍ಯಾಪಿಡ್‌ನಲ್ಲಿ 30 ಜನರಿಗೆ ಪಾಸಿಟಿವ್ ಬಂದಿದೆ.

# ನಾಳೆ ವಿಕಲಚೇತನರಿಗೆ ಲಸಿಕೆ ಆಂದೋಲನ

ದಾವಣಗೆರೆ, ಮೇ 31 - ಜಿಲ್ಲೆಯ ಎಲ್ಲಾ ವಿಧದ ವಿಕಲಚೇತನರಿಗೆ ಜೂನ್ 2 ಮತ್ತು 3 ರಂದು ಎರಡು ದಿನಗಳ ಕಾಲ ಜಿಲ್ಲೆಯಲ್ಲಿನ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ನಿರೋಧಕ ಲಸಿಕೆಯನ್ನು ವಿಕಲಚೇತನರಿಗೋಸ್ಕರ ಮೀಸಲಿಟ್ಟು ಹಾಕಲಾಗುವುದು.

ಎಲ್ಲಾ ವಿಕಲಚೇತನರು ಎಂ.ಆರ್.ಡಬ್ಲ್ಯೂ, ವಿ. ಆರ್.ಡಬ್ಲ್ಯೂ ಮತ್ತು ಯು.ಆರ್.ಡಬ್ಲ್ಯೂಗಳ ಸಹಕಾರದೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ತಪ್ಪದೇ ಲಸಿಕೆ ಹಾಕಿಸಿಕೊಳ್ಳಬೇಕು. ಜಿಲ್ಲೆಯ ವಿಕಲಚೇತನರಿಗಾಗಿಯೇ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗ್ರಾ.ಪಂ. ವ್ಯಾಪ್ತಿಯ ವಿ. ಆರ್.ಡಬ್ಲ್ಯೂ ಮತ್ತು ಎಂ.ಆರ್.ಡಬ್ಲ್ಯೂಗಳನ್ನು ಸಂಪರ್ಕಿಸಬಹುದು. ತಾಲ್ಲೂಕು ಎಂ.ಆರ್. ಡಬ್ಲ್ಯೂಗಳ ದೂರವಾಣಿ ಸಂಖ್ಯೆ ಬಿ.ಚನ್ನಪ್ಪ (95908 29024), ಕೆ.ಸುಬ್ರಮಣ್ಯಂ (9945738141), ಕೆ.ಎಂ. ಶೈಲಜಾ (9886366809), ಎಂ.ಕೆ ಶಿವನಗೌಡ (9902105734), ಕೆ.ಹೆಚ್.ಗಂಗಾಧರ (98449 55315) ಹಾಗೂ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ 08192-263939 ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಧಿಕಾರಿ ಜಿ.ಎಸ್. ಶಶಿಧರ್ ತಿಳಿಸಿದ್ದಾರೆ.

# ಶಿವಕುಮಾರ ಬಡಾವಣೆಯ ನಾಗರಿಕರ ಹಿತ ರಕ್ಷಣಾದಿಂದ ಫುಡ್ ಕಿಟ್ ವಿತರಣೆ



ದಾವಣಗೆರೆ, ಮೇ 31- ನಗರದ ಶಿವಕುಮಾರ ಬಡಾವಣೆ 2 ನೇ ಹಂತದ ನಾಗರಿಕ ಹಿತರಕ್ಷಣಾ ಸಮಿತಿಯಿಂದ ಆಟೋ ಚಾಲಕರಿಗೆ ಮತ್ತು ಮನೆಗೆಲಸ ಮಾಡುವ ಬಡ ಮಹಿಳೆಯರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರ ಸಮ್ಮುಖದಲ್ಲಿ ಇಂದು ಫುಡ್ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಜಿ.ಮುಪ್ಪಣ್ಣ, ಕಾರ್ಯದರ್ಶಿಗಳಾದ ಚನ್ನಬಸಪ್ಪ, ಮೌನೇಶ್ವರಪ್ಪ, ತಿಮ್ಮಣ್ಣ, ಓಂಕಾರಪ್ಪ, ಚೇತನ್ ಬಾಯಿ, ಷಣ್ಮುಖಪ್ಪ, ಪರಮೇಶ್ವರಪ್ಪ, ಶೇಖರ್, ವೀರೇಶ್, ಕೆ. ಎಂ.ಬಸವರಾಜಪ್ಪ ಮೆಣಸಿನಕಾಯಿ, ವೀರೇಶ್ ಮತ್ತು ಇತರರು ಹಾಜರಿದ್ದರು.

# ಕೂಡ್ಲಿಗಿ : ಹೊಸಹಳ್ಳಿ ವಾರದ ಸಂತೆ ಶಾಲಾ ಮೈದಾನಕ್ಕೆ ಸ್ಥಳಾಂತರ



ಕೂಡ್ಲಿಗಿ, ಮೇ 31- ತಾಲ್ಲೂಕಿನ ಹೊಸಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕಾನಾಹೊಸಹಳ್ಳಿಯ ಹೊಸಹಳ್ಳಿಯಲ್ಲಿ ಜನರ ಅನುಕೂಲಕ್ಕಾಗಿ ವಾರದ ಸಂತೆ ನಡೆಯುತ್ತಿದ್ದು, ಆ ಸ್ಥಳದಿಂದ ಎಸ್‌ಕೆಡಿಡಿವಿ ಪ್ರೌಢಶಾಲೆ ಮೈದಾನಕ್ಕೆ ಸ್ಥಳಾಂತರಿಸಲಾಗಿದೆ. ಗ್ರಾಮ ಪಂಚಾಯ್ತಿ ಹಾಗೂ ಪೊಲೀಸ್ ಇಲಾಖೆ ಜವಾಬ್ದಾರಿ ವಹಿಸಿ ಜನರಿಗೆ ಅನುಕೂಲವಾಗಲೆಂದು ಸ್ಥಳವನ್ನು ಸ್ವಚ್ಛಗೊಳಿಸಿ, ವ್ಯಾಪಾರಸ್ಥರು ಕುಳಿತುಕೊಳ್ಳಲು ಮಾರ್ಕ್ ಮಾಡುವ ಕಾರ್ಯ ನಡೆಯಿತು. ಕಾನಾಹೊಸಹಳ್ಳಿ ಪಿಎಸ್‌ಐ ತಿಮ್ಮಣ್ಣ ಚಾಮನೂರು ಸ್ಥಳಕ್ಕೆ ಆಗಮಿಸಿ, ಪರಿಶೀಲಿಸಿದರು.

# ಉಚಿತ ಆನ್ ಲೈನ್ ಡೆಂಟಲ್ ಸಹಾಯವಾಣಿ

ದಾವಣಗೆರೆ, ಮೇ 31 - ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ಉಚಿತ ಆನ್ ಲೈನ್ ಡೆಂಟಲ್ ಸಹಾಯವಾಣಿ ಮೂಲಕ ತೀವ್ರತರವಾದ ದಂತ ಸಮಸ್ಯೆ ಇರುವವರಿಗೆ, ಗುಟ್ಕಾ ತಂಬಾಕು ಸೇವನೆ ಮಾಡುವವರಿಗೆ ಡಾ.ಸ್ವಾಮಿ. ಎಂ.ಸಿ.ಎಲ್, ದಂತ ವೈದ್ಯರು, ಇವರಿಂದ ಫೋನ್ ಮೂಲಕ ಸಲಹೆ ಸೂಚನೆ ಹಾಗೂ ತಾತ್ಕಾಲಿಕ ಪರಿಹಾರವನ್ನು ಇಂದು ನೀಡಲಾಯಿತು.

ಈ ಸೇವೆಯನ್ನು ಸಾಮಾಜಿಕ ಕಳಕಳಿಯಿಂದ ಲಾಕ್ ಡೌನ್ ತೆರವು ಗೊಳಿಸುವವರೆಗೆ ವಿಸ್ತರಣೆ ಮಾಡಲಾಗಿದ್ದು, ಪ್ರತಿದಿನ ಬೆಳಗ್ಗೆ 10 ರಿಂದ 1 ರವರೆಗೆ ಇದರ ಸದುಪಯೋಗವನ್ನು ಫೋನ್ ಮೂಲಕ (93809 84534) ಸಾರ್ವಜನಿಕರು ಪಡೆಯವಂತೆ ಡಾ. ಲೋಹಿತ್ ಸ್ವಾಮಿ ಕೋರಿದ್ದಾರೆ.

# ದೊರೆಸ್ವಾಮಿ ನಿಧನಕ್ಕೆ ಗೋವಿಂದ ರೆಡ್ಡಿ ಶೋಕ

ದಾವಣಗೆರೆ, ಮೇ 31- ನಾಡಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಅವರ ನಿಧನಕ್ಕೆ ಜಿ.ಪಂ ಮಾಜಿ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಎ.ಗೋವಿಂದ ರೆಡ್ಡಿ ಶೋಕ ವ್ಯಕ್ತಪಡಿಸಿದ್ದಾರೆ.

**ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗ. ಫೋ. : 94808 38983**

GSTIN : 29AAAGU0029EIZH

ಸಂ.ಕೃ.ತೋ.ಸಂ.ಕೇ.ಕ/2021-22 ದಿನಾಂಕ : 29.05.2021

## ಮರು ಟೆಂಡರ್ ಪ್ರಕಟಣೆ

**ಉಲ್ಲೇಖ : ಸಂ.ಕೃ.ತೋ.ಸಂ.ಕೇ.ಕ/30/2021-22 ದಿನಾಂಕ : 30.05.2021**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯಲ್ಲಿ 2020-21 ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ ನಾಟಿ ಮಾಡಿರುವ 58 ಎಕರೆಯಲ್ಲಿನ ಭತ್ತವನ್ನು ಕಟಾವು ಮಾಡಬೇಕಾಗಿರುವುದರಿಂದ ಆಸಕ್ತಿಯುಳ್ಳ ಭತ್ತ ಕಟಾವು ಮಾಡುವ ಯಂತ್ರದ ಮಾಲೀಕರು ಅಥವಾ ಗುತ್ತಿಗೆದಾರರು/ಕೂಲಿ ಕಾರ್ಮಿಕರು ಪ್ರತಿ ಗಂಟೆಯ/ಪ್ರತಿ ಎಕರೆಯ ಕೆಲಸಕ್ಕೆ ತಮ್ಮ ದರವನ್ನು ಲಿಖಿತ ಮೂಲಕ ದಿನಾಂಕ : 04.06.2021 ರೊಳಗೆ ಹಿರಿಯ ಕ್ಷೇತ್ರಾಧೀಕ್ಷಕರು, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ ಇವರ ಹೆಸರಿಗೆ ಸೀಲ್ಡ್ ಲಕೋಟೆಯಲ್ಲಿ ಸಲ್ಲಿಸಬೇಕಾಗಿ ತಿಳಿಯಪಡಿಸಲಾಗುತ್ತದೆ. ಹಾಗೂ ಲಕೋಟೆ ಮೇಲೆ ತಮ್ಮ ಅಂಚೆ ವಿಳಾಸವನ್ನು ನಮೂದಿಸಬೇಕಾಗಿ ತಿಳಿಯಪಡಿಸಲಾಗುತ್ತದೆ.

**ಸಹಿ/- ಹಿರಿಯ ಕ್ಷೇತ್ರಾಧೀಕ್ಷಕರು**

**ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ-577219, ಚನ್ನಗಿರಿ ತಾಲ್ಲೂಕು.**

# ಹರಿಹರದ ಆಸ್ಪತ್ರೆಗಳಿಗೆ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಭೇಟಿ



ಹರಿಹರ, ಮೇ 31- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ನಗರದ ಎಸ್.ಜೆ.ವಿ.ಪಿ. ಕಾಲೇಜು ಹಾಸ್ಟೆಲ್‌ನಲ್ಲಿ ಕೊರೊನಾ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಯೋಗಕ್ಷೇಮ ವಿಚಾರಿಸಿದರು.

ಅವರು ರೋಗಿಗಳನ್ನು ಮಾತನಾಡಿಸಿ, ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ವೈದ್ಯಕೀಯ ಚಿಕಿತ್ಸೆ ಸೇರಿದಂತೆ ಹಲವು ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಒದಗಿಸುತ್ತಿದ್ದಾರೆಯೇ ಎಂದು ವಿಚಾರಿಸಿ ಬೇಗನೆ ಗುಣಮುಖರಾಗುತ್ತೀರಾ, ಧೈರ್ಯವಾಗಿ ಇರಿ ಎಂದು ಕೊರೊನಾ ಸೋಂಕಿತರಿಗೆ ಆತ್ಮಸ್ಥೈರ್ಯವನ್ನು ತುಂಬಿದರು. ರೋಗಿಗಳ ಪರವಾಗಿ ಜಿಗಳಿ ಮಂಜುನಾಥ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ, ಡಿವೈಎಸ್ಪಿ ನರಸಿಂಹ ರಾಜು, ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ಜಿಲ್ಲಾ ಆರೋಗ್ಯ ಅಧಿಕಾರಿ ನಾಗರಾಜ್, ನೋಡಲ್ ಅಧಿಕಾರಿ ನಟರಾಜ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರ ಮೋಹನ್, ಪೌರಾಯುಕ್ತೆ ಎಸ್. ಲಕ್ಷ್ಮಿ, ತಾಪಂ ಇ.ಓ ಗಂಗಾಧರನ್, ಡಾ. ವಿಶ್ವನಾಥ, ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಸಿಪಿಐ ಸತೀಶ್‌ಕುಮಾರ್, ಪಿಎಸ್‌ಐ ರವಿಕುಮಾರ್ ಮತ್ತಿತರರು ಹಾಜರಿದ್ದರು,

# ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಡಯಟ್‌ನಿಂದ ಶಿಕ್ಷಕರಿಗೆ ಜೂಮ್ ಮೀಟ್

ದಾವಣಗೆರೆ, ಮೇ 31- ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಡಯಟ್‌ನ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಆದ ಹೆಚ್.ಕೆ.ಲಿಂಗರಾಜು ಅವರ ಮಾರ್ಗದರ್ಶನ ಇಂದಿನಿಂದ ಬರುವ ಜೂನ್ 26 ರವರೆಗೆ ಜಿಲ್ಲೆಯ ವಿಷಯವಾರು ಶಿಕ್ಷಕರಿಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಮಕ್ಕಳಿಗೆ ಆನ್‌ಲೈನ್‌ನ ವಿವಿಧ ಆ್ಯಪ್ ಬಳಸಿ, ಕಲಿಸುವ ಬಗ್ಗೆ ಜೂಮ್ ಮೀಟ್ ಆಯೋಜಿಸಲಾಗಿದೆ.

ಆರಂಭದ ಇಂದಿನ ದಿನ ಗಣಿತಕ್ಕೆ ಸಂಬಂಧಿಸಿದಂತೆ ಜೂಮ್ ಮೀಟ್ ನಡೆಸಲಾಯಿತು. ಇದರಲ್ಲಿ ಜಿಲ್ಲೆಯ ಸುಮಾರು 440 ಕ್ಕೂ ಹೆಚ್ಚು ಗಣಿತ ಶಿಕ್ಷಕರು ಭಾಗವಹಿಸಿದ್ದರು. ಇದಕ್ಕೆ ಇಲಾಖೆಯ ಯಾವುದೇ ಅನುದಾನ ಇರದಿದ್ದರೂ ಸ್ವಯಂ ಪ್ರೇರಣೆಯಿಂದ ಶಿಕ್ಷಕರು ಭಾಗವಹಿಸಿರುವ ಬಗ್ಗೆ ಡಯಟ್ ಪ್ರಾಂಶುಪಾಲ ಹೆಚ್.ಕೆ.ಲಿಂಗರಾಜು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್.ಪರಮೇಶ್ವರಪ್ಪ, ಸಿಟಿಇ ಪದನಿಮಿತ್ತ ಸಹನಿರ್ದೇಶಕ ಹೆಚ್.ಮಂಜುನಾಥ್ ಅವರುಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲೆಯ ಎಲ್ಲಾ ಗಣಿತ ಶಿಕ್ಷಕರು ಜೂಮ್ ಮೀಟಿಂಗ್‌ನಲ್ಲಿ ಪಾಲ್ಗೊಂಡು, ವಿವಿಧ ಆ್ಯಪ್ ಬಳಸಿ, ಮಕ್ಕಳನ್ನು ಕಲಿಕೆಯ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ಮಾಹಿತಿ ತಿಳಿಯಲು ಅವಕಾಶ ಮಾಡಿದ್ದಕ್ಕೆ ಡಯಟ್ ಪ್ರಾಂಶುಪಾಲರಿಗೆ ಕೃತಜ್ಞತೆ ಸಲ್ಲಿಸಿದರು.

ಹೆಚ್.ಎನ್.ಸುಜಾತಾ, ಭುವನೇಶ್ವರಿ, ರೀನಾ, ಜ್ಯೋತಿ ಕುಮಾರ್ ಅವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಗಣಿತ ಕಲಿಕೆಯ ಸವಾಲುಗಳ ಬಗ್ಗೆ ಸುಲಭದ ಪರಿಹಾರ ವಿವರಿಸಿ, ಶಿಕ್ಷಕರಿಗೆ ಕಲಿಕೆಗೆ ಪ್ರೋತ್ಸಾಹಿಸಿದರು.

ಜೂಮ್ ಮೀಟ್‌ನ ಕೋಆರ್ಡಿನೇಟರ್‌ಗಳಾದ ಡಯಟ್‌ನ ಹಿರಿಯ ಉಪನ್ಯಾಸಕರಾದ ಜಿ.ಎಸ್. ರಾಜಶೇಖರಪ್ಪ, ಹೆಚ್.ಲೇಪಾಕ್ಷಪ್ಪ, ಮಂಗಳಾ, ತಾಂತ್ರಿಕ ಸಹಾಯಕ ಕೆ.ಎಂ.ಯೋಗೇಶ್ ಅವರುಗಳಿಗೆ ವಂದಿಸಲಾಯಿತು.

ಇದೇ ಸಂದರ್ಭದಲ್ಲಿ ಜೂಮ್ ಮೀಟ್ ಮೂಲಕ ಪ್ರಾಂಶುಪಾಲ ಹೆಚ್.ಕೆ.ಲಿಂಗರಾಜುರವರು ವಯೋನಿವೃತ್ತರಾದ ಡಯಟ್‌ನ ಉಪನ್ಯಾಸಕ ಜಿ. ತಿಪ್ಪೇಸ್ವಾಮಿ ಅವರ ನಿವೃತ್ತಿ ಜೀವನವು ಸುಖಮಯವಾಗಲೆಂದು ಶುಭ ಹಾರೈಸಿದರು.

# 20 ಸಾವಿರ ಕೋಟಿ ರೂ. ಬೆಳೆ ಸಾಲ

**(1ನೇ ಪುಟದಿಂದ)** 2020-21 ನೇ ಸಾಲಿನಲ್ಲಿ 15,400 ಕೋಟಿ ರೂ. ಗುರಿ ನೀಡಲಾಗಿತ್ತು. 17,901 ಕೋಟಿ ರೂ. ತಲುಪಲಾಗಿದೆ. ಇದರಲ್ಲಿ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲಗಳು ಸೇರಿವೆ ಎಂದು ಹೇಳಿದರು. ನಾವು ಕೊಟ್ಟಿದ್ದ ಗುರಿ ಹೆಚ್ಚಿನ ಮಟ್ಟದಲ್ಲೇ ತಲುಪಲಾಗಿದೆ. ಲಾಕ್‌ಡೌನ್ ಮುಗಿದ ಬಳಿಕ ಎಲ್ಲಾ ಡಿಸಿಸಿ ಬ್ಯಾಂಕ್‌ಗಳಿಗೆ ಭೇಟಿ ಕೊಡುವುದಾಗಿ ಅವರು ಹೇಳಿದರು.

ಕಳೆದ ವರ್ಷ ಐದಾರು ಡಿಸಿಸಿ ಬ್ಯಾಂಕ್‌ಗಳು ಸ್ವಲ್ಪ ಗುರಿ ತಲುಪಿಲ್ಲ. ಅವರಿಗೆ ಈ ವರ್ಷ ಗುರಿ ತಲುಪಲೇಬೇಕು ಎಂದು ನಿರ್ದೇಶನ ನೀಡಲಾಗಿದೆ ಎಂದು ಅವರು ಹೇಳಿದರು.

# 360 ಪಾಸಿಟಿವ್ 818 ಬಿಡುಗಡೆ

**(1ನೇ ಪುಟದಿಂದ)** ಜಗಳೂರು 17, ಚನ್ನಗಿರಿ 49, ಹೊನ್ನಾಳಿ 49 ಹಾಗೂ ಹೊರ ಜಿಲ್ಲೆಯ 12 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಹೊನ್ನಾಳಿಯ ಬಿದರಹಟ್ಟಿ ತಾಂಡಾದ 60 ವರ್ಷದ ಮಹಿಳೆ ಕೋವಿಡ್ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ 4314 ಸಕ್ರಿಯ ಪ್ರಕರಣಗಳಿವೆ.








ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡವಾಣೆಯ ರಿಯಲ್ ಎಸ್ಟೇಟ್ ಉದ್ಯಮಿಗಳೂ, ಬಡವರ ಬಂಧು, ದೀನ - ದಲಿತರ ಸಾಕಾರ ಮೂರ್ತಿ, ಸರ್ವ ಜನಾಂಗದ ಒಡನಾಡಿ, ಬುದ್ದನಂತೆ ಶಾಂತಿಪ್ರಿಯ, ಬಸವಣ್ಣನವರಂತೆ ಕಾಯಕವೇ ಕೈಲಾಸ ಎಂದು ನಂಬಿರುವ ಹಾಗೂ ಮಾಜಿ ನಗರಸಭೆ ಸದಸ್ಯರೂ, ಕಾಂಗ್ರೆಸ್ ಮುಖಡರೂ ಆದ

ಶ್ರೀ ಶಾಮನೂರು ಎಸ್. ಬಸವರಾಜ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಶುಭಾಶಯ ಕೋರುವವರು :

✦ ಕಣ್ಣಾಳ ಅಂಜಿನಪ್ಪ, ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ, ರಾಜ್ಯ ಪ್ರಧಾನ ಕಾರ್ಯದರ್ಶಿ ಕರ್ನಾಟಕ ದಲಿತ ಮಹಾಸಭಾ.
✦ ಸುಧಾಕರ್, ಆಟೋ ಚಾಲಕರ ಸಂಘ. ✦ ನಿಂಗಪ್ಪ ಡಿ.ಎಸ್.ಎಸ್. ✦ ಶಾಮನೂರು ನಾಗರಾಜ್
✦ ಭಾಸ್ಕರ್ ರಾವ್ ಪಿ.ಎನ್. ✦ ಬಿ.ಎನ್. ರಂಗಸ್ವಾಮಿ ಕಾಂಗ್ರೆಸ್ ಮುಖಂಡರು ✦ ಆಪೆ ಗಾಡಿ ಮಂಜುನಾಥ್
✦ ಮಡಿವಾಳರ ಸುರೇಶ್ ✦ ಬಿ.ಹೆಚ್. ರಾಘವೇಂದ್ರ ಎಸ್.ಎಸ್. ಮಾಲ್ ✦ ಬೆಳಕೇರಿ ಅಂಜಿನಪ್ಪ
✦ ಬಿ.ಎನ್. ಮಂಜುನಾಥ್ ✦ ಆರ್. ಹನುಮಂತ್ ✦ ಕೆ.ಎನ್. ಹರೀಶ್ ✦ ಮಲ್ಲೇಶ್
✦ ಎಸ್. ಬಸವರಾಜ್ ಅಭಿಮಾನಿಗಳು ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗದ ಪದಾಧಿಕಾರಿಗಳು, ಶಾಮನೂರು ಗ್ರಾಮದ ಕಾಂಗ್ರೆಸ್ ಮುಖಂಡರು ಹಾಗೂ ಅಭಿಮಾನಿಗಳು.

ಆರೋಗ್ಯವೇ ಭಾಗ್ಯ. ಮಾಸ್ಕ್ ಧರಿಸಿ. ಕೊರೊನಾ ಭಯ ಬೇಡ, ಎಚ್ಚರ ಇರಲಿ.

# ಜನಸಂಖ್ಯೆ ಹೆಚ್ಚಳಕ್ಕೆ ಚೀನಾ ಪ್ರಯತ್ನ

## ದಂಪತಿಗಳು 3ನೇ ಮಗು ಹೊಂದಲು ಅನುಮತಿ

ಬೀಜಿಂಗ್, ಮೇ 31 – ಜನನ ದರಕ್ಕೆ ಉತ್ತೇಜನ ನೀಡಲು ಮುಂದಾಗಿರುವ ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷ, ಎಲ್ಲಾ ದಂಪತಿಗಳು ಮೂರು ಮಕ್ಕಳು ಹೊಂದಲು ಅನುಮತಿ ನೀಡಿದೆ. ಜನಸಂಖ್ಯೆಯ ಸರಾಸರಿ ವಯಸ್ಸು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

1980ರಿಂದ ಚೀನಾ ಸರ್ಕಾರ ಜನಸಂಖ್ಯಾ ಬೆಳವಣಿಗೆ ಮೇಲೆ ಕಡಿವಾಣ ಹಾಕಿದೆ. ಆದರೆ, ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದು ಆರ್ಥಿಕತೆಗೆ ಹೊರೆಯಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ, ಮೂರು ಮಕ್ಕಳನ್ನು ಹೊಂದಲು ಅವಕಾಶ ನೀಡಿದೆ ಎಂದು ಜಿನುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಚೀನಾ ಪ್ರಸಕ್ತ 140 ಕೋಟಿ ಜನಸಂಖ್ಯೆ ಹೊಂದಿದೆ. ಈ ದಶಕದಲ್ಲಿ ಜನಸಂಖ್ಯೆ ಗರಿಷ್ಠ ಪ್ರಮಾಣಕ್ಕೆ ತಲುಪಿ, ನಂತರ ಇಳಿಮುಖವಾಗುವ ಅಂದಾಜಿದೆ. ಮೇ 11ರಂದು ಪ್ರಕಟಿಸಲಾದ ಜನಗಣತಿಯ ಪ್ರಕಾರ, ನಿರೀಕ್ಷಿಸಿದ್ದಕ್ಕಿಂತ ವೇಗವಾಗಿ ಜನಸಂಖ್ಯೆ ಇಳಿಮುಖವಾಗಲಿದೆ. ಇದರಿಂದಾಗಿ ಪಿಂಚಣಿ ಹೊರೆ ಹೆಚ್ಚಾದರೆ, ಆರೋಗ್ಯ ವ್ಯವಸ್ಥೆಯ ಮೇಲೆ ಪರಿಣಾಮವಾಗುತ್ತಿದೆ. ಭವಿಷ್ಯದಲ್ಲಿ ಲಭ್ಯವಾಗುವ ಕಾರ್ಮಿಕರ ಸಂಖ್ಯೆಯೂ ಕಡಿಮೆಯಾಗಲಿದೆ.

2015ರವರೆಗೆ ದಂಪತಿ ಒಂದೇ ಮಗು ಹೊಂದಬಹುದಿತ್ತು. ನಂತರದಲ್ಲಿ ಎರಡು ಮಕ್ಕಳನ್ನು ಹೊಂದಲು ಅನುಮತಿ ನೀಡಲಾಗಿತ್ತು. ಮುಂದಿನ ವರ್ಷ ಜನಸಂಖ್ಯೆ ಸ್ವಲ್ಪ ಏರಿಕೆಯಾಯಿತಾದರೂ, ನಂತರ ಮತ್ತೆ ಇಳಿಮುಖವಾಯಿತು. ಮಕ್ಕಳ ಬೆಳೆಸುವ ವೆಚ್ಚ, ಕುಂಠಿತವಾಗುತ್ತಿರುವ ಉದ್ಯೋಗಾವಕಾಶ ಹಾಗೂ ಹಿರಿಯರನ್ನು ನೋಡಿಕೊಳ್ಳುವ ಹೊರೆ ಕಾರಣದಿಂದ ಮಕ್ಕಳನ್ನು ಬಯಸುವುದಿಲ್ಲ ಎಂದು ಸಾಕಷ್ಟು ದಂಪತಿಗಳು ಹೇಳುತ್ತಿದ್ದಾರೆ. ಚೀನಾದಲ್ಲಿ ಕಳೆದ ವರ್ಷ 1.2 ಕೋಟಿ ಮಕ್ಕಳು ಜನಿಸಿವೆ. ಇದು 2019ಕ್ಕೆ ಹೋಲಿಸಿದರೆ ಶೇ.20ರ ಇಳಿಕೆಯಾಗಿದೆ.

# 7 ಕೇಂದ್ರಗಳಲ್ಲಿ ಕೋವ್ಯಾಕ್ಸಿನ್ ಎರಡನೇ ಡೋಸ್ ಲಸಿಕೆ

ದಾವಣಗೆರೆ, ಮೇ 31- ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆ ಸೇರಿದಂತೆ ಜಿಲ್ಲೆಯ ಒಟ್ಟು 7 ಲಸಿಕಾ ಕೇಂದ್ರಗಳಲ್ಲಿ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆಯನ್ನು ನೀಡಲಾಗುವುದು ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ ತಿಳಿಸಿದ್ದಾರೆ.

ಭಾರತ ಸರ್ಕಾರದಿಂದ ಕೋವ್ಯಾಕ್ಸಿನ್ ಲಸಿಕೆ ಸರಬರಾಜಾಗಿದ್ದು, ಜಿಲ್ಲೆಯ ಒಟ್ಟು 7 ಲಸಿಕಾ ಕೇಂದ್ರಗಳಲ್ಲಿ 2ನೇ ಡೋಸ್ ನೀಡಿಕೆಗಾಗಿ ಬಳಸಲಾಗುವುದು. ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು.

**ಕೋವ್ಯಾಕ್ಸಿನ್ ಎರಡನೇ ಡೋಸ್ ನೀಡಲಾಗುವ ಲಸಿಕಾ ಕೇಂದ್ರಗಳ ವಿವರ ಇಂತಿದೆ : ಹೊನ್ನಾಳಿ ತಾಲ್ಲೂಕು :** ಚೀಲೂರು ಪ್ರಾಥಮಿಕ ಆರೋಗ್ಯ ಕೇಂದ್ರ-8088435735, ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆ-82774 81297, ಕ್ಯಾಸಿನಕೆರೆ ಪ್ರಾ.ಆ.ಕೇಂದ್ರ ದೂರವಾಣಿ ಸಂಖ್ಯೆ 97408 18974. **ಹರಿಹರ ತಾಲ್ಲೂಕು :** ಹೊಳೆಸಿರಿಗೆರೆ ಪ್ರಾ.ಆ.ಕೇಂದ್ರ-87620 77752, ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರ-9341149789. **ದಾವಣಗೆರೆ ತಾಲ್ಲೂಕು:** ಚಿಗಟೇರಿ ಜಿಲ್ಲಾ ಆಸ್ಪತ್ರೆ - 9972699969, ತೋಳಹುಣಸೆ ಪ್ರಾ.ಆ.ಕೇಂದ್ರ-9611213130 ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ, ಮೇ 31 – ಸೋಮವಾರ ಪೆಟ್ರೋಲ್ ದರ 29 ಪೈಸೆ ಹಾಗೂ ಡೀಸೆಲ್ ದರ 26 ಪೈಸೆಯಷ್ಟು ಹೆಚ್ಚಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ತಿಳಿಸಿವೆ.

ಈ ತಿಂಗಳಲ್ಲಿ 16 ಬಾರಿ ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆಯಾಗಿದೆ. ಒಟ್ಟಾರೆ ಒಂದು ತಿಂಗಳಲ್ಲಿ ಪೆಟ್ರೋಲ್ ದರ 3.83 ರೂ. ಹಾಗೂ ಡೀಸೆಲ್ ದರ 4.42 ರೂ. ಹೆಚ್ಚಾಗಿದೆ.




# ನಗರಕ್ಕಿಂದು ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಖಾತೆ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ಬೆಳಿಗ್ಗೆ 10 ರಿಂದ 12.30 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 12.30 ರಿಂದ 1 ಗಂಟೆವರೆಗೆ ಆಸ್ಪತ್ರೆಗಳಿಗೆ ಭೇಟಿ ನೀಡುವ ಸಚವರು, ಮಧ್ಯಾಹ್ನ 1 ಕ್ಕೆ ಬೆಂಗಳೂರಿಗೆ ತೆರಳುವರು.

# ಒಂದೇ ಅಡಿಕೆ ಮರದಲ್ಲಿ 6 ಕವಲುಗಳು



ಚನ್ನಗಿರಿ, ಮೇ 31- ತಾಲ್ಲೂಕಿನ ಹಿರೇಕೋಗಲೂರು ಗ್ರಾಮದ ಸಿ.ಈ. ತಿಪ್ಪೇರುದ್ರಸ್ವಾಮಿ ಅವರ ಅಡಿಕೆ ತೋಟದಲ್ಲಿ ಸುಮಾರು 20 ವರ್ಷದ ಅಡಿಕೆ ಮರವೊಂದರಲ್ಲಿ 20 ಅಡಿಗಳ ಎತ್ತರದಲ್ಲಿ ಆರು ಸಸಿಗಳು ಕವಲುಗಳಾಗಿ ಬೆಳೆದಿದ್ದು, ಅದರಲ್ಲಿ ಮೂರು ಕವಲುಗಳಲ್ಲಿ ಮೂರು ಕೊನೆಗಳು ಹರಳುಗಟ್ಟಿವೆ.


ಇನ್ನು ಮೂರು ಹೊಸ ಕವಲುಗಳು ಮೂರು ಅಡಿ ಎತ್ತರಕ್ಕೆ ಬೆಳೆದಿದ್ದು, ಇವೂ ಸಹ ಮುಂದೆ ಕೊನೆ ಬರುವ ಸಾಧ್ಯತೆ ಇದ್ದಂತಿದೆ. ಸಾಮಾನ್ಯವಾಗಿ ಬುಡದಲ್ಲಿ ಅಂದರೆ ತಳಭಾಗದಲ್ಲಿಯೇ ಎರಡು ಮರಗಳು ಜೋಡಿಯಾಗಿ ಅವಳಿ ಮರಗಳು ಬೆಳೆಯುವುದು ಸಾಮಾನ್ಯ. ಈ ರೀತಿ ಎತ್ತರದಲ್ಲಿ ಒಂದೇ ಅಡಿಕೆ ಮರದಲ್ಲಿ ಕವಲುಗಳು ಬೆಳೆಯುವುದು ಅಪರೂಪದಲ್ಲಿ ಅಪರೂಪವಾಗಿದೆ ಇದು ನಿಜಕ್ಕೂ ಸೃಷ್ಟಿಯ ವಿಸ್ಮಯವೇ ಸರಿ.

# ಸಾಲ ಪಾವತಿ ಆದೇಶಕ್ಕೆ ಸಿದ್ದು ತರಾಟೆ

ಬೆಂಗಳೂರು, ಮೇ 31 - ಸಹಕಾರ ಸಂಘಗಳ ಮೂಲಕ ಸದಸ್ಯರು ಪಡೆದಿರುವ ಸಾಲ /ಕಂತುಗಳ ಪಾವತಿಯನ್ನು ಮುಂದೂಡಿರುವ ಸರ್ಕಾರ ಜೂನ್ ಬಳಿಕ ಪೂರ್ತಿ ಬಾಕಿ ಕಟ್ಟಬೇಕು ಎಂದು ಆದೇಶ ಹೊರಡಿಸಿದೆ. ಈ ಸುತ್ತೋಲೆ ವಾಪಸ್ ಪಡೆಯಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಸಾಲ / ಕಂತುಗಳ ಪಾವತಿ ಅವಧಿ ಮುಂದೂಡಿ ಬಳಿಕ ಪೂರ್ತಿ ಕಟ್ಟಬೇಕು ಎಂಬ ಆದೇಶ ಜನರಿಗೆ ಹಾಕಿರುವ ಟೋಪಿ ಎಂದು ಅವರು ಕಿಡಿ ಕಾರಿದ್ದಾರೆ.

ಕೊರೊನಾ ಹೆಸರಿನಲ್ಲಿ ಪ್ಯಾಕೇಜ್ ಘೋಷಣೆ ಮಾಡಿ ಈ ರೀತಿಯ ಆದೇಶ ಹೊರಡಿಸಿರುವುದು ಸರಿಯಲ್ಲ ಎಂದು ಸಿಎಂಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte